೮ ನಾವು ನಿಮ್ಮಲ್ಲಿ ಕ್ರಮವಿಲ್ಲದವರಾಗಿರಲಿಲ್ಲ. ನಾವು ಒಬ್ಬನಿಂದಲಾದರೂ ರೊಟ್ಟಿಯನ್ನು ಸುಮ್ಮನೆ ತಿನ್ನ
೯ ಲಿಲ್ಲ; ಆದರೆ [1]ಅಧಿಕಾರವಿಲ್ಲದೆ ಇರುವದರಿಂದಲ್ಲ, ನಮ್ಮನ್ನು ಅನುಸರಿಸುವದಕ್ಕೆ ನಿಮಗೆ ನಮ್ಮನ್ನು ಮಾದರಿ
ಯಾಗಿ ಕೊಡುವ ಹಾಗೆ, ನಿಮ್ಮಲ್ಲಿ ಒಬ್ಬನಿಗೂ ಭಾರವಾಗದ ಹಾಗೆ, ಕಷ್ಟದಲ್ಲಿಯೂ ಪ್ರಯಾಸದಲ್ಲಿಯೂ
೧೦ ರಾತ್ರಿ ಹಗಲು [2]ಕೆಲಸ ಮಾಡಿದೆವು. ಯಾಕಂದರೆ ಒಬ್ಬನು ಕೆಲಸ ಮಾಡಲೊಲ್ಲದಿದ್ದರೆ, ಅವನು ತಿನ್ನಲೂ
೧೧ ಬಾರದೆಂದು, ನಿಮ್ಮ ಹತ್ತರವಿದ್ದಾಗ, ನಿಮಗೆ ಆಜ್ಞಾಪಿಸಿದೆವು. ಯಾಕಂದರೆ ಕೆಲವರು ಕ್ರಮವಿಲ್ಲದೆ
೧೨ ನಿಮ್ಮಲ್ಲಿ ನಡೆದು, ಕೆಲಸ ಮಾಡದೆ, ತಿರುಗಾಡುತ್ತಾರೆಂದು ಕೇಳುತ್ತೇವೆ. ಅಂಥವರಿಗೆ, [3]ಸಮಾಧಾನದಿಂದ
ಕೆಲಸ ಮಾಡಿ ಸ್ವಂತ ರೊಟ್ಟಿಯನ್ನು ತಿನ್ನ ಬೇಕೆಂದು, ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದ ಬುದ್ಧಿ ಹೇಳಿ,
೧೩ ಆಜ್ಞಾಪಿಸುತ್ತೇವೆ. ಆದರೆ, ಸಹೋದರರೇ, ನೀವು ದಣಿಯದೆ ಸತ್ಕ್ರಿಯೆ ಮಾಡಿರಿ.
೧೪ ಪತ್ರಿಕೆಯಲ್ಲಿರುವ ನಮ್ಮ ಮಾತಿಗೆ ಒಬ್ಬನು ವಿಧೇಯನಾಗದಿದ್ದರೆ, ಅವನನ್ನು ಗುರುತಿಡಿರಿ; ಅವನು ನಾಚಿಕೆ
೧೫ ಪಡುವ ಹಾಗೆ, ಅವನ ಸಂಗಡ [4]ಕಲೆಯ ಬೇಡಿರಿ. [5]ಆದಾಗ್ಯೂ ಅವನನ್ನು ಶತ್ರುವೆಂದೆಣಿಸದೆ, ಸಹೋದರ
ನಿಗೆಂದು, ಬುದ್ಧಿ ಹೇಳಿರಿ.
೧೬ ಆದರೆ ಸಮಾಧಾನದ ಕರ್ತನು ತಾನೇ ನಿಮಗೆ ಯಾವಾಗ್ಯೂ ಎಲ್ಲಾ ವಿಧದಿಂದ ಸಮಾಧಾನವನ್ನು
ಕೊಡಲಿ. ಕರ್ತನು ನಿಮ್ಮೆಲ್ಲರ ಸಂಗಡ ಇರಲಿ.
೧೭ ಪೌಲನೆಂಬ ನನ್ನ ಸ್ವಂತ ಕೈಯಿಂದ ವಂದನೆಯು, ಎಲ್ಲಾ ಪತ್ರಿಕೆಗಳಲ್ಲಿ [6]ಇದೇ ಗುರುತು; ಹೀಗೆ ಬರೆಯು
೧೮ ತ್ತೇನೆ. ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

1. ಇದು ಬೋಧಿಸುವವರು ಬೋಧನೆ ಹೊಂದುವವರಿಂದ ಸಹಾಯ ಹೊಂದುವ ಅಧಿಕಾರವನ್ನು ಕುರಿತದ್ದು. (೧ ಕೊರಿ. ೯. ೬.) ಇಂಥ ಅಧಿಕಾರವು ಪೌಲನಿಗೆ ಇದ್ದಾಗ್ಯೂ, ಅದನ್ನು ಅವನು ಬಳಿಸದೆ ತನ್ನ ಸ್ವಂತ ಕೈಯಿಂದ ಕೆಲಸ ಮಾಡಿ ಜೀವನ ಮಾಡಿದನು. ಹೀಗೆ ಕೆಲಸ ಮಾಡ ಮನಸ್ಸಿಲ್ಲದವನು ಉಣ್ಣಲೂ ಬಾರದೆಂಬ ಒಂದು ಗಾದೆಯ ವಾಕ್ಯ ಹೇಳುತ್ತಾನೆ. ಇದರಿಂದ ಕ್ರೈಸ್ತರು ಕೆಲಸ ಮಾಡದೆ ತಿರುಗಾಡುವದೂ, ಭಿಕ್ಷೆ ಬೇಡುವದೂ ನಾಚಿಕೆಯಾದದ್ದೆಂದು ತಿಳಿಯ ಬೇಕು.

2. ಅಪೊ. ಕ್ರಿ. ೧೮. ೩. ವಚನದ ವ್ಯಾಖ್ಯಾನ ನೋಡ ಬೇಕು.

3. ವ್ಯರ್ಥರು ಸೋಮಾರಿತನದಿಂದ ವೃಥಾ ಕಾಲ ಕಳಿಯುವರಾದರೆ, ಉತ್ತಮ ಭಕ್ತರು ಒಳ್ಳೇ ಕೆಲಸ ಮಾಡಿ ಶಾಂತವಾಗಿ ಜೀವನ ಮಾಡ ಬೇಕು. ಹೀಗೆ ಮಾಡುವವರು ತಮಗೆ ಮಾತ್ರವಲ್ಲ, ಮತ್ತೊಬ್ಬರಿಗೂ ದಣಿಯದೆ ಮೇಲು ಮಾಡುತ್ತಿರುವರು. (ಎಫೆ. ೪. ೨೮.)

4. (೧ ಕೊರಿ. ೫. ೧೦, ೧೧. ವಚನಗಳ ವ್ಯಾಖ್ಯಾನ ನೋಡ ಬೇಕು.) ಮೇಲೆ ಹೇಳಿದ ದೇವರ ಕಟ್ಟಳೆಯನ್ನು ಮೀರುವವರಿಗೆ ಮಿಕ್ಕಾದವರಿಂದ ನಾಚಿಕೆಯೂ ದಂಡನೆಯೂ ಬರ ತಕ್ಕದ್ದು ನ್ಯಾಯ.

5. ಅಕ್ರಮಕಾರರನ್ನು ಬಿಟ್ಟು ತೊಲಗುವದು ಅವರಿಗೆ ಬುದ್ಧಿ ಬರುವದಕ್ಕಾಗಿಯೇ ಹೊರ್ತು, ಅವರು ಕೆಟ್ಟು ಹೋಗುವದಕ್ಕಾಗಿ ಅಲ್ಲ. ಆದದರಿಂದ ಅವರನ್ನು ಶತ್ರುಗಳಾಗಿ ಎಣಿಸದೆ ಸಹೋದರರೆಂದೆಣಿಸಿ, ಅವರು ಗುಣ ಪಡುವ ಹಾಗೆ ಪ್ರೀತಿಯಿಂದಲೂ ನಯ ಭಯಗಳಿಂದಲೂ ಅವರಿಗೆ ಬುದ್ಧಿ ಹೇಳ ಬೇಕು. ಹಾಗೆ ಮಾಡುವವರಿಗೆ ದೇವರ ಸಹಾಯದಿಂದ ಸಮಾಧಾನವಿರುವದೆಂದು ಮುಂದಿನ ವಚನದಲ್ಲಿ ತೋರುತ್ತದೆ.

6. ಪೌಲನು ತಾನು ಬರೆದ ಪತ್ರಿಕೆಗಳನ್ನು ಬೇರೊಬ್ಬನಿಂದ ಬರೆಸಿದಾಗ್ಯೂ, ಅವು ಅವನಿಂದಲೇ ಬರೆಯಲ್ಪಟ್ಟವೆಂಬುವದಕ್ಕೆ, ಕಡೆಯಲ್ಲಿ ಅವನ ಸ್ವಂತ ಕೈಯಿಂದ ಬರೆದ ವಂದನೆಯೇ ಗುರುತಾಗಿಯೂ ಸಾಕ್ಷಿಯಾಗಿಯೂ ಇತ್ತು. (ರೋಮಾ. ೧೬. ೨೨.)

# THE FIRST EPISTLE OF PAUL THE APOSTLE TO TIMOTHY.

## ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಬರೆದ ಮೊದಲನೇ ಪತ್ರಿಕೆಯ ಪೀಠಿಕೆ.

ತಿಮೊಥೆಯನ ಹೆಸರು ಅಪೊ. ಕ್ರಿ. ೧೬. ೧. ವಚನದಲ್ಲಿ ಮೊದಲನೇ ಸಾರಿ ಹೇಳಲ್ಪಟ್ಟದೆ. ಅವನ ತಂದೆಯು ಗ್ರೀಕನಾಗಿಯೂ, ಅವನ ತಾಯಿ ಯೆಹೂದ್ಯಳಾಗಿಯೂ ಇದ್ದರು. ದೇವಭಕ್ತರಾದ ಅವನ ತಾಯಿಯೂ ಅಜ್ಜಿಯೂ, ಅವನು ಬಾಲ್ಯನಾಗಿರುವಾಗಲೇ ಅವನಿಗೆ ವೇದ ಬರಹಗಳನ್ನು ಕಲಿಸಿದರು. (೨ ತಿಮೊ. ೧. ೫; ೩. ೧೪, ೧೫.) ಅಪೊಸ್ತಲನಾದ ಪೌಲನು ಲುಸ್ತ್ರ ಊರಿನಲ್ಲಿ ಸುವಾರ್ತೆಯನ್ನು ಪ್ರಸಂಗಿಸಿದಾಗ ಅವನು ಅದನ್ನು ಅನುಸರಿಸಿದನೆಂದು ತೋರುತ್ತದೆ. (ಅಪೊ. ಕ್ರಿ. ೧೪. ೬—೨೦.) ಅದರಿಂದ ಪೌಲನು ಅವನನ್ನು ವಿಶ್ವಾಸದಲ್ಲಿ ನಿಜ ಮಗನೆಂದು ಕರೆಯುತ್ತಾನೆ. (೧. ೨.) ಅವನು ಎರಡನೇ ಸಾರಿ ಆ ಊರಿಗೆ ಹೋದಾಗ ತಿಮೊಥೆಯನ ಒಳ್ಳೇ ನಡತೆಯನ್ನು ಕುರಿತು ಎಲ್ಲರೂ ಸಾಕ್ಷಿ ಕೊಟ್ಟರು. (ಅಪೊ. ಕ್ರಿ. ೧೬. ೨, ೩.) ಅವನು ಇನ್ನೂ ಎಳೇ ಪ್ರಾಯದವನಾಗಿದ್ದರೂ ಸತ್ಪುತ್ರನಾಗಿದ್ದ ಕಾರಣ ಪೌಲನು ಅವನನ್ನು ತನ್ನ ಸೇವೆಗೆ ಸಹಾಯಕನಾಗಿ ಆದು ಕೊಂಡನು. ಯೆಹೂದ್ಯ ಜಾತಿಗೂ ಗ್ರೀಕ ಜಾತಿಗೂ ಸಮ್ಮಂಥ ಪಟ್ಟವನಾಗಿದ್ದ ಅವನು, ಸುವಾರ್ತೆಯ ಸೇವೆಯಲ್ಲಿ ಉಭಯ ಜಾತಿಯವರಿಗೂ ಮೇಲು ಮಾಡ ಶಕ್ತನಾಗಿದ್ದನು. (ಅಪೊ. ಕ್ರಿ. ೧೬. ೩. ವಚನದ ವ್ಯಾಖ್ಯಾನ ನೋಡ ಬೇಕು.) ಬಹಳ ಕಾಲ ಪೌಲನ ಸಂಗಡ ಇದ್ದು, ಕೆಲವು ಸಮಯಗಳಲ್ಲಿ ಸಭೆಗಳಿಗೆ ಬೋಧಿಸುವದಕ್ಕೆ ಒಂಟಿಯಾಗಿದ್ದು, ದೇವರ ಸೇವೆಯನ್ನು ಭಕ್ತಿ ವೈರಾಗ್ಯದಿಂದ ಮಾಡುವದರಲ್ಲಿಯೇ ಅವನು ತನ್ನ ಜೀವದ ಕಾಲವೆಲ್ಲಾ ಕಳೆದನೆಂದು ತೋರುತ್ತದೆ. ಅವನು ಮುಖ್ಯವಾಗಿ ಪೌಲನ ಬೋಧನೆಯನ್ನೂ ಅವನ ಪ್ರೀತಿಯನ್ನೂ ಹೊಂದಿದವನಾಗಿದ್ದನು. (೨ ತಿಮೊ. ೨. ೨; ೩. ೧೪.)

ಈ ಪತ್ರಿಕೆ ಬರೆಯಲ್ಪಟ್ಟ ಕಾಲವನ್ನು ಕುರಿತು ವಿದ್ವಾಂಸರಲ್ಲಿ ಬಹಳ ತರ್ಕವುಂಟು. ಪೌಲನು ಎಫೆಸದ ಸಭೆಯನ್ನು ವಿಚಾರಿಸುವ ಉದ್ದಿಶ್ಯ ತಿಮೊಥೆಯನನ್ನು ಏರ್ಪಡಿಸಿ ಮಕೆದೋನ್ಯಕ್ಕೆ ಹೋಗಿದ್ದ ಕಾಲದಲ್ಲಿ ಈ ಪತ್ರಿಕೆ ಬರೆಯಲ್ಪಟ್ಟಿತೆಂದು ತೋರುತ್ತದೆ. (೧. ೩, ೪; ೩. ೧೪, ೧೫; ೪. ೧೩.) ಪೌಲನು ಮೂರು ಸಾರಿ ಮಕೆದೋನ್ಯಕ್ಕೆ ಪ್ರಯಾಣ ಮಾಡಿದನೆಂದು ಅಪೊಸ್ತಲರ ಕ್ರಿಯೆಗಳಲ್ಲಿ ಬರೆಯಲ್ಪಟ್ಟದೆ. ಆದರೆ ಈ ಪ್ರಯಾಣಗಳಲ್ಲಿ ಈ ಪತ್ರಿಕೆ ಬರಿಯಲ್ಪಡಲಿಲ್ಲವೆಂದು ತೋರುತ್ತದೆ. ಪೌಲನ ಮೊದಲನೇ ಪ್ರಯಾಣಕ್ಕೆ ಮುಂಚೆ ಎಫೆಸದಲ್ಲಿ ಸುವಾರ್ತೆ ಪ್ರಸಂಗಿಸಲಿಲ್ಲ. ಆಗ ತಿಮೊಥೆಯನು ಸಹ ಅವನ ಸಂಗಡಲೇ ಹೋದನು. (ಅಪೊ. ಕ್ರಿ. ೧೬. ೩; ೧೭. ೧೪.) ಅವನ ಎರಡನೇ ಪ್ರಯಾಣದಲ್ಲಿ ಸಹ ತಿಮೊಥೆಯನನ್ನು ಮುಂದಾಗಿ ಕಳುಹಿಸಿದನು. (ಅಪೊ. ಕ್ರಿ. ೧೯. ೨೨. ೧ ಕೊರಿ. ೪. ೧೭.) ಮೂರನೇ ಪ್ರಯಾಣದಲ್ಲಿ ತಿಮೊಥೆಯನು ತಿರಿಗಿ ಪೌಲನ ಸಂಗಡ ಹೋದನು. (ಅಪೊ. ಕ್ರಿ. ೨೦. ೩, ೪.) ಇದರಿಂದ ಕೆಲವರು ಪೌಲನು ಎಫೆಸ ಪಟ್ಟಣದಲ್ಲಿದ್ದ ಮೂರು ವರುಷ ಕಾಲದಲ್ಲಿ ಒಂದು ಸಾರಿ ಮಕೆದೋನ್ಯಕ್ಕೆ ಹೋದನೆಂದೂ, ಅದರ ವಿಷಯ ಅಪೊಸ್ತಲರ ಕ್ರಿಯೆಗಳಲ್ಲಿ ಏನೂ ಹೇಳಲ್ಪಡಲಿಲ್ಲವೆಂದೂ, ಆ ಪ್ರಯಾಣದಲ್ಲಿಯೇ ಪೌಲನು ಈ ಪತ್ರಿಕೆಯನ್ನು ಬರೆದನೆಂದೂ ಅಭಿಪ್ರಾಯ ಹೇಳುತ್ತಾರೆ. ಆದರೆ ಈ ಅಭಿಪ್ರಾಯವು ಸರಿಯಲ್ಲವೆಂದು ಮುಂದೆ ಬರುವ ನ್ಯಾಯಗಳಿಂದ ತೋರುವದು. ಪೌಲನು ಹೀಗೆ ಪ್ರಯಾಣ ಮಾಡಿದ್ದು ನಿಜವೆಂದು ಒಪ್ಪಿ ಕೊಂಡಾಗ್ಯೂ, ಅದು ಸ್ವಲ್ಪ ಕಾಲದಲ್ಲಿ ನಡೆದಿರುವದೇ ಹೊರ್ತು ಪತ್ರಿಕೆಯಲ್ಲಿ ತೋರುವ ಪ್ರಕಾರ ಅದಕ್ಕೆ ಬಹಳ ಕಾಲ ಸಂದಿರಲಾರದು. ಮತ್ತು ಪೌಲನು ಎಫೆಸದಲ್ಲಿದ್ದ ಆ ಕಾಲದಲ್ಲಿಯೇ ಕಳ್ಳ ಬೋಧಕರ ಗದ್ದಲವು ಅಷ್ಟು ಮುಖ್ಯವಾಗಿ ಸಂಭವಿಸಿತೆಂದು ನೆನಸುವದಕ್ಕೆ ಹೇತುವೆ ಇಲ್ಲ. ಇದಲ್ಲದೆ ಈ ಪತ್ರಿಕೆಯೂ ಇನ್ನು ಮುಂದೆ ಬರುವ ಎರಡು ಪತ್ರಿಕೆಗಳೂ ಭಾಷೆಯ ನಡೆಯಲ್ಲಿಯೂ, ಸಂಗತಿಗಳಲ್ಲಿಯೂ, ಸಭೆಯ ಸ್ಥಿತಿಯನ್ನು ಕುರಿತ ವಿವರಗಳಲ್ಲಿಯೂ ಹೊಂದಿಕೆಯಾಗಿರುವದನ್ನು ಕುರಿತು ಯೋಚಿಸುವಾಗ, ಈ ಮೂರು ಪತ್ರಿಕೆಗಳೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಕಾಲದಲ್ಲಿ ಬರೆಯಲ್ಪಟ್ಟವೆಂದು ಕಾಣುತ್ತದೆ. ಮತ್ತು ಈ ಪತ್ರಿಕೆಗಳಿಗೂ ಪೌಲನ ಉಳಿದ ಪತ್ರಿಕೆಗಳಿಗೂ ನಾನಾ ವಿಷಯಗಳಲ್ಲಿ ಭೇದ ಉಂಟು. ಸಭೆಯ ಆಳಿಕೆಯನ್ನು ಕುರಿತೂ, (೧ ತಿಮೊ. ೩. ೧—೧೦; ೫. ೯—೧೬.) ಅದರಲ್ಲಿ ಉಂಟಾಗಿದ್ದ ತಪ್ಪುಗಳನ್ನು ಕುರಿತೂ ಈ ಪತ್ರಿಕೆಗಳಲ್ಲಿ ಹೇಳಿರುವ ವಿಧಕ್ಕೂ, ಉಳಿದ ಪತ್ರಿಕೆಗಳಲ್ಲಿ ಹೇಳಿರುವ ವಿಧಕ್ಕೂ ಬಹಳ ವ್ಯತ್ಯಾಸವಾಗಿರುತ್ತದೆ. ತಪ್ಪುಗಳನ್ನು ಕುರಿತು ಈ ಪತ್ರಿಕೆಗಳಲ್ಲಿ ಹೇಳಿರುವ ವಿಶೇಷಗಳು, ಪೇತ್ರನ ಎರಡನೇ ಪತ್ರಿಕೆ, ಯೂದನ ಪತ್ರಿಕೆ, ಯೋಹಾನನ ಪತ್ರಿಕೆ ಮುಂತಾದವುಗಳಲ್ಲಿರುವ ವಿಷಯಗಳಿಗೆ ಸಮವಾಗಿವೆ.

ಇತ್ಯಾದಿ ಸಂಗತಿಗಳನ್ನು ಯೋಚಿಸುವಾಗ, ಅಪೊಸ್ತಲರ ಕ್ರಿಯೆಗಳ ಕಡೇ ಸಂಧಿಯಲ್ಲಿ ಹೇಳಿರುವ ಬಂಧಕದಿಂದ ಪೌ

ಲನು ಬಿಡುಗಡೆ ಹೊಂದಿ, ಆಸ್ಯದ ಸಭೆಗಳ ಬಳಿಗೆ ಹೋದಾಗ, ಸುಮಾರು ೬೩ನೇ ವರುಷದಲ್ಲಿ ಈ ಪತ್ರಿಕೆಯನ್ನು ಬರೆದನೆಂದು ನಿರ್ಣಯಿಸ ತಕ್ಕದ್ದಾಗಿದೆ. (ಅಪೊ. ಕ್ರಿ. ೨೮. ೩೧. ವಚನದ ವ್ಯಾಖ್ಯಾನ ನೋಡ ಬೇಕು.)

ಆ ಕಾಲದಲ್ಲಿ ಉಂಟಾಗಿದ್ದ ತಪ್ಪುಬೋಧನೆಗಳನ್ನು ಖಂಡಿಸಿ, ಸುವಾರ್ತೆಯ ಸತ್ಯಗಳನ್ನು ಧೈರ್ಯವಾಗಿ ಸಾರಲೂ, ಸಭೆಯ ಆಳಿಕೆ, ಕ್ರಮಗಳು, ಉದ್ಯೋಗಗಳು, ಧರ್ಮಸ್ಥಾಪನೆಗಳು ಮುಂತಾದ ವಿಷಯಗಳನ್ನು ಕುರಿತು ತಿಮೊಥೆಯನಿಗೆ ಬೋಧಿಸ ತಕ್ಕದ್ದಾಗಿಯೂ ಈ ಪತ್ರಿಕೆ ಬರೆಯಲ್ಪಟ್ಟಿತು. ಇದರಲ್ಲಿಯೂ ಮುಂದೆ ಬರುವ ಎರಡು ಪತ್ರಿಕೆಗಳಲ್ಲಿಯೂ ಬೋಧಕರ ಹಂಗುಗಳು ವಿಸ್ತಾರವಾಗಿ ತೋರಿಸಿರುವದರಿಂದ ಇವುಗಳಿಗೆ "ಬೋಧಕರ ಪತ್ರಿಕೆಗಳು" ಎಂಬ ಹೆಸರುಂಟು. ಇವುಗಳಲ್ಲಿ ಹೇಳಿರುವ ಹಂಗುಗಳನ್ನು ಬೋಧಕರೆಲ್ಲರೂ ತಪ್ಪದೆ ನಡಿಸುವವರಾದರೆ, ಸತ್ಯಪರನಾದ ನಿತ್ಯ ದೇವರ ಮುಂದೆ ಅವರು ಉತ್ತಮರಾಗಿ ಎಣಿಸಲ್ಪಟ್ಟು ಮುಕ್ತಿಪದವಿಯನ್ನು ಹೊಂದುವರೆಂಬುವದಕ್ಕೆ ಸಂದೇಹವಿಲ್ಲ.

# THE FIRST EPISTLE OF PAUL THE APOSTLE TO TIMOTHY.

## ಅಪೊಸ್ತಲನಾದ ಪೌಲನು
# ತಿಮೊಥೆಯನಿಗೆ ಬರೆದ ಮೊದಲನೇ ಪತ್ರಿಕೆ.

ಆಶೀರ್ವಾದವು; ಕಳ್ಳಬೋಧಕರನ್ನು ಕುರಿತು ಎಚ್ಚರಿಸಿದ್ದು; ನ್ಯಾಯಪ್ರಮಾಣದಿಂದ ಉಂಟಾಗುವ ಪ್ರಯೋಜನಗಳು; ಪೌಲನು ಗುಣ ಪಟ್ಟು ಅಪೊಸ್ತಲ ಉದ್ಯೋಗ ಹೊಂದಿದ್ದಕ್ಕಾಗಿ ದೇವರನ್ನು ಸ್ತುತಿಸಿದ್ದು.

1. [1]ನಮ್ಮ ರಕ್ಷಕನಾದ ದೇವರೂ, ನಮ್ಮ ನಿರೀಕ್ಷೆಯಾಗಿರುವ ಕರ್ತನಾದ ಯೇಸು ಕ್ರಿಸ್ತನೂ, ಇವರ[2] ಅಪ್ಪ
೨ ಣೆಯ ಪ್ರಕಾರ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು, ವಿಶ್ವಾಸದಲ್ಲಿ [3]ನಿಜ ಮಗನಾದ ತಿಮೊಥೆಯ
ನಿಗೆ—ತಂದೆಯಾದ ದೇವರಿಂದಲೂ, ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಿಂದಲೂ, ಕೃಪೆಯೂ [4]ಕರುಣೆ
ಯೂ ಸಮಾಧಾನವೂ ಆಗಲಿ.
೩, ೪ ನಾನು ಮಕೆದೋನ್ಯಕ್ಕೆ ಹೊರಡುವಾಗ, ಅನ್ಯ ಬೋಧನೆ ಹೇಳ ಬೇಡೆಂದೂ, ವಿಶ್ವಾಸದಲ್ಲಿರುವ [5]ದಿವ್ಯ
ಕಟ್ಟುವಿಕೆಗಿಂತ ತರ್ಕಕ್ಕೆ ಹೆಚ್ಚಾಗಿ ಆಸ್ಪದವಾಗುವ [6]ಕಟ್ಟುಕಥೆಗಳನ್ನೂ, ತೀರದ ವಂಶಾವಳಿಗಳನ್ನೂ ಲಕ್ಷಿಸ
ಬೇಡೆಂದೂ, ಕೆಲವರಿಗೆ ಆಜ್ಞಾಪಿಸುವದಕ್ಕೆ ಎಫೆಸದಲ್ಲಿ ನಿಲ್ಲ ಬೇಕೆಂದು ನಿನ್ನನ್ನು ಬೇಡಿ ಕೊಂಡ ಪ್ರಕಾರ ಮಾಡು.
೫ [7]ಆಜ್ಞೆಯ ಪೂರ್ಣತೆ ಏನಂದರೆ, ಶುದ್ಧ ಹೃದಯದಿಂದಲೂ, ಒಳ್ಳೇ ಮನಸ್ಸಾಕ್ಷಿಯಿಂದಲೂ ನಿಷ್ಕಪಟವಾದ

---

1. ಪೌಲನು ತನ್ನ ವಾಡಿಕೆಯ ಪ್ರಕಾರ ಆಶೀರ್ವಾದ ಹೇಳಿದ ತರುವಾಯ, (೧, ೨. ವ.) ಸಭೆಯಲ್ಲಿ ಉಂಟಾಗಿದ್ದ ಮತಭೇದಗಳನ್ನು ತೊಲಗಿಸುವ ಹಾಗೆ ತಿಮೊಥೆಯನಿಗೆ ಕೊಡಲ್ಪಟ್ಟ ಅಧಿಕಾರವನ್ನು ಅವನಿಗೆ ಜ್ಞಾಪಕ ಪಡಿಸಿ, (೩—೭. ವ.) ಕಳ್ಳಗುರುಗಳ ದುರ್ಬೋಧನೆಗೆ ವ್ಯತಿರಿಕ್ತವಾಗಿ ನ್ಯಾಯಪ್ರಮಾಣದ ಪ್ರಯೋಜನವನ್ನೂ, ಅದಕ್ಕೂ ಸುವಾರ್ತೆಗೂ ಇರುವ ಸಮ್ಮಂಧವನ್ನೂ ತೋರಿಸುತ್ತಾನೆ. (೮—೧೧. ವ.) ಮತ್ತು ತನ್ನನ್ನು ಗುಣ ಪಡಿಸಿ, ಶ್ರೇಷ್ಠವಾದ ಅಪೊಸ್ತಲ ಉದ್ಯೋಗದಲ್ಲಿ ಏರ್ಪಡಿಸಿದ ಕರುಣೆಯುಳ್ಳ ದೇವರನ್ನು ಅತ್ಯಂತ ಭಕ್ತಿಯಿಂದ ಸ್ತುತಿಸಿ, (೧೨—೧೭. ವ.) ತಿಮೊಥೆಯನಿಗೆ ಕೆಲವು ಬುದ್ಧಿಗಳನ್ನು ಹೇಳುತ್ತಾನೆ. (೧೮—೨೦. ವ.)

2. ಈ ದಿವ್ಯ ಅಪ್ಪಣೆಯನ್ನು ಅಪೊ. ಕ್ರಿ. ೯. ೧೫ಲ್ಲಿಯೂ, ೧೬. ೨ಲ್ಲಿಯೂ ನೋಡ ಬಹುದು. ಕರ್ತನೂ ರಕ್ಷಕನೂ ಆಶ್ರಯವೂ ನಂಬಿಕೆಯೂ ಆಗಿರುವ ಕೃಪಾಮೂರ್ತಿಯ ಕಟ್ಟಳೆಯನ್ನು ಹೊಂದಿ ಅವನಿಗೆ ಸೇವೆ ಮಾಡುವವರು ಭಾಗ್ಯವಂತರು.

3. ಸುವಾರ್ತೆಯ ಮೂಲವಾಗಿ ಪೌಲನು ತಿಮೊಥೆಯನನ್ನು ಹೆತ್ತದ್ದರಿಂದ ಅವನು ಅವನಿಗೆ ಕುಮಾರನಾಗಿದ್ದು, ತಂದೆಯಂತೆ ಮಗನೂ ಪ್ರಿಯನೂ ಭಕ್ತನೂ ಆಗಿದ್ದದರಿಂದ ನಿಜ ಮಗನಾಗಿದ್ದನು. (ಫಿಲಿ. ೨. ೨೨.)

4. ಎಲ್ಲಾ ಪತ್ರಿಕೆಗಳಲ್ಲಿಯೂ ಪೌಲನು ಬರೆದ ಹುದುವಾದ ಆಶೀರ್ವಾದದಲ್ಲಿ, ಬೋಧಕರ ಪತ್ರಿಕೆಗಳಲ್ಲಿ ಮಾತ್ರ ಕರುಣೆ ಎಂಬ ಪದವನ್ನು ಕೂಡಿಸಿ ಬರಿಯುತ್ತಾನೆ. ಕ್ರಿಸ್ತನ ಕರುಣೆ ಇಲ್ಲದೆ ಬೋಧಕರು ತಮ್ಮ ಕೆಲಸವನ್ನು ಸರಿಯಾಗಿ ಈಡೇರಿಸ ಅಶಕ್ತರಾಗಿರುವರು.

5. ದಿವ್ಯ ಕಟ್ಟುವಿಕೆ ಅಂದರೆ, ದಿವ್ಯ ಕಾರ್ಯಗಳಲ್ಲಿ ಅಭಿವೃದ್ಧಿ ಹೊಂದುವದು. ನಿಷ್ಪ್ರಯೋಜನವಾದ ಕಾರ್ಯಗಳ ವಿಷಯ ಬರೀ ತರ್ಕವಾಡುವದರಿಂದ ಆತ್ಮವು ಜ್ಞಾನದಲ್ಲಿ ವೃದ್ಧಿ ಹೊಂದಲಾರದು.

6. ಕಟ್ಟುಕಥೆಗಳು ಎಂಬುವದು, ಯೆಹೂದ್ಯ ಬೋಧಕರಾದ ರಬ್ಬಿಗಳು ಬೋಧಿಸಿದ ನಿಷ್ಪ್ರಯೋಜನವಾದ ಕಥೆಗಳನ್ನು ಕುರಿತದ್ದು. (ತೀತ. ೧. ೧೪.) ವಂಶಾವಳಿಗಳು ಎಂಬುವದು ಯೆಹೂದ್ಯ ಕುಟುಂಬದ ಸಂಗತಿಗಳನ್ನೂ, ಕಳ್ಳಗುರುಗಳು ಅವುಗಳ ವಿಷಯ ಹೇಳಿದ ವಿಪರೀತ ಜ್ಞಾನಾರ್ಥವನ್ನೂ ಕುರಿತದ್ದು. (ತೀತ. ೩. ೯.)

7. ತಿಮೊಥೆ ಮುಂತಾದ ಉತ್ತಮ ಬೋಧಕರ ಉಪದೇಶದ ತಾತ್ಪರ್ಯವು ವ್ಯರ್ಥ ತರ್ಕ ಹುಟ್ಟಿಸುವ ನಿಷ್ಪ್ರಯೋಜನವಾದ ವಿಷಯಗಳಲ್ಲ. (೨ ತಿಮೊ. ೨. ೨೩.) ಅದು ಶುದ್ಧ ಹೃದಯದಲ್ಲಿಯೂ, ಒಳ್ಳೇ ಮನಸ್ಸಾಕ್ಷಿಯಲ್ಲಿಯೂ, ನಿಷ್ಕಪಟವಾದ ವಿಶ್ವಾಸದಲ್ಲಿಯೂ ಹುಟ್ಟುವ ಪ್ರೀತಿಯೇ. (ಗಲಾ. ೫. ೬.) ಉತ್ತಮ ಬೋಧಕರು ಪ್ರೀತಿಯನ್ನು ಹುಟ್ಟಿಸುವಂತೆ ಸತ್ಯವನ್ನೇ ಬೋಧಿಸ ತಕ್ಕದ್ದು.

೬ ವಿಶ್ವಾಸದಿಂದಲೂ, ಉಂಟಾಗುವ ಪ್ರೀತಿಯೇ. [1]ಇವುಗಳಿಗೆ ಕೆಲವರು ತಪ್ಪಿ, ಹರಟೆ ಮಾತಿಗೆ ತಿರುಗಿದ್ದಾರೆ.
೭ ಅವರು ನ್ಯಾಯಶಾಸ್ತ್ರಿಗಳಾಗಿರ ಇಚ್ಛೈಸಿ, ತಾವು ಹೇಳುವದೇನೆಂದೂ, ತಾವು ದೃಢ ಪಡಿಸುವದೇನೆಂದೂ,
ತಿಳುಕೊಳ್ಳುವದಿಲ್ಲ.

೮ ಆದರೆ ನ್ಯಾಯಪ್ರಮಾಣವು, ಒಬ್ಬನು ಅದನ್ನು [2]ನ್ಯಾಯವಾಗಿ ಬಳಸಿದರೆ, ಒಳ್ಳೇದೆಂದು ಬಲ್ಲೆವು.
೯ ನ್ಯಾಯಪ್ರಮಾಣವು [3]ನೀತಿವಂತರಿಗೋಸ್ಕರವಲ್ಲ, ಅನೀತಿವಂತರೂ, ಅವಿಧೇಯರೂ, ಭಕ್ತಿಹೀನರೂ, ಪಾಪಿ
೧೦ ಷ್ಠರೂ, ಅಪವಿತ್ರರೂ, ಅಪಭ್ರಷ್ಟರೂ, [4]ತಂದೆ ತಾಯಿಗಳ ಕೊಲೆಗಾರರೂ, ನರಹಿಂಸಕರೂ, ಜಾರರೂ,
ಪುರುಷಸಂಗಮರೂ, [5]ನರಚೋರರೂ, ಸುಳ್ಳುಗಾರರೂ, ಅಬದ್ಧಪ್ರಮಾಣಿಕರೂ, ಇವರಿಗೋಸ್ಕರವೂ,
೧೧ ನನಗೆ ಒಪ್ಪಿಸಲ್ಪಟ್ಟ ಭಾಗ್ಯವುಳ್ಳ ದೇವರ [6]ಮಹಿಮೆಯಾದ ಸುವಾರ್ತೆಯ ಪ್ರಕಾರವಾಗಿರುವ [7]ಸ್ವಸ್ಥ ಬೋ
ಧನೆಗೆ ವಿರೋಧವಾಗಿರುವ ಬೇರೆ ಯಾವದಕ್ಕೋಸ್ಕರವೂ ಇರುತ್ತದೆಂದು ತಿಳಿದು ಕೊಳ್ಳುತ್ತೇವೆ.

೧೨ ಮತ್ತು ನನ್ನನ್ನು ನಂಬಿಕೆಯುಳ್ಳವನೆಂದೆಣಿಸಿ, ಸೇವೆಯಲ್ಲಿಟ್ಟು [8]ಬಲ ಪಡಿಸಿದ ನಮ್ಮ ಕರ್ತನಾದ ಕ್ರಿಸ್ತ
೧೩ ಯೇಸುವಿಗೆ ಸ್ತೋತ್ರ ಮಾಡುತ್ತೇನೆ. ಮೊದಲು ದೂಷಕನೂ, ಹಿಂಸಕನೂ, [9]ಬಲಾತ್ಕಾರಿಯೂ ಆಗಿ
೧೪ ದ್ದೆನು; ಆದರೆ [10]ತಿಳಿಯದೆ ಅವಿಶ್ವಾಸದಲ್ಲಿ ಮಾಡಿದ್ದರಿಂದ ಕರುಣಿಸಲ್ಪಟ್ಟೆನು. ಮತ್ತು ನಮ್ಮ ಕರ್ತನ ಕೃಪೆ
೧೫ ಯು ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸ ಪ್ರೀತಿಗಳ ಸಂಗಡ ಅತ್ಯಧಿಕವಾಯಿತು. [11]ಎಲ್ಲಾ ಅಂಗೀಕಾರಕ್ಕೆ
ಯೋಗ್ಯವಾದ ನಂಬಿಕೆಯಾದ ವಾಕ್ಯವು ಇದೇ—ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೆ ಲೋಕಕ್ಕೆ
೧೬ ಬಂದನು. ಅವರಲ್ಲಿ [12]ಮೊದಲಿನವನು ನಾನೇ. ಆದರೆ ಯೇಸು ಕ್ರಿಸ್ತನು [13]ಮೊದಲಿನವನಾದ ನನ್ನಲ್ಲಿ

1. ಕಳ್ಳಬೋಧಕರು ಮೇಲೆ ಹೇಳಿದ ಸುಗುಣಗಳನ್ನು ಎಣಿಸದೆ, ಮೋಶೆಯ ನ್ಯಾಯಪ್ರಮಾಣದಲ್ಲಿರುವ ಸೂಕ್ಷ್ಮ ವಿಷಯಗಳನ್ನು ಕುರಿತು ತರ್ಕಿಸುತ್ತಿದ್ದರು. ಆ ವಿಷಯಗಳೂ ಅವುಗಳ ವಿಷಯವಾದ ತರ್ಕಗಳೂ ಅವರಿಗೆ ಸಹ ಗೋಚರವಾಗಿರಲಿಲ್ಲ. ಈ ಕಳ್ಳಬೋಧಕರು ಸತ್ಯಮಾರ್ಗದ ಸಾರವನ್ನು ಜಾರ ಬಿಟ್ಟು, ನಿಸ್ಸಾರವಾದ ನಿಷ್ಪ್ರಯೋಜನವಾದ ವಿಷಯಗಳನ್ನು ಕುರಿತು ಎಡೆಬಿಡದೆ ತರ್ಕಿಸುತ್ತಿದ್ದರು.

2. ನ್ಯಾಯಪ್ರಮಾಣದ ಸ್ವಭಾವವನ್ನೂ ಅದರ ಗುರಿಯನ್ನೂ ತಿಳಿದು ನಡಿಯುವವರಿಗೆ ಅದು ತನ್ನಲ್ಲಿ ಒಳ್ಳೇದಾಗಿಯೂ, ಪರಿಶುದ್ಧಾತ್ಮನಿಂದ ಮೇಲನ್ನು ಬೆಳಿಸುವದಾಗಿಯೂ ಇರುವದು. (೯, ೧೦. ವ. ರೋಮಾ. ೭. ೧೨. ಗಲಾ. ೩. ೨೪.)

3. ನೀತಿವಂತನು ಅಂದರೆ, ಕ್ರಿಸ್ತನ ಅಮಿತ ಪುಣ್ಯದಿಂದ ನೀತಿವಂತನಾಗಿಯೂ ಪರಿಶುದ್ಧನಾಗಿಯೂ ಇರುವವನು. (ರೋಮಾ. ೬. ೧೪. ಗಲಾ. ೫. ೧೮. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.)

4. ತಂದೆ ತಾಯಿಗಳನ್ನು ಹೊಡಿಯುವವನು ಅವರನ್ನು ಕೆಲ ಸಮಯಗಳಲ್ಲಿ ಕೊಲೆ ಮಾಡುವವನಾಗಿರುವನು. (ಹೊರ. ೨೧. ೧೫.) ಈ ವಚನದಲ್ಲಿರುವ ಪಾಪಗಳು ಐದನೇ ಕಟ್ಟಳೆಯಿಂದ ಒಂಭತ್ತನೇ ಕಟ್ಟಳೆಯ ವರಿಗೂ ಇರುವ ಆಜ್ಞೆಗಳನ್ನು ಮೀರುವದರಿಂದಾಗುವ ಪಾಪಗಳನ್ನು ಕುರಿತದ್ದು.

5. ದಾಸರ ವ್ಯಾಪಾರ ಮಾಡುವವರೇ ನರಚೋರರು. ಇದು ಎಂಟನೇ ಕಟ್ಟಳೆಗೆ ವಿರೋಧವಾದ ಪಾಪವು.

6. ಸುವಾರ್ತೆ ದೇವರ ಸಮಾಧಾನವನ್ನೂ ಆನಂದವನ್ನೂ ಮನುಷ್ಯರಿಗೆ ಅನುಗ್ರಹಿಸಿ, ಆತನ ಮಹಿಮೆಯನ್ನು ಪ್ರಕಟ ಮಾಡುವದರಿಂದ ಅದು ಮಹಿಮೆಯ ಸುವಾರ್ತೆಯೇ.

7. ಮೇಲೆ ಹೇಳಿದ ಪಾಪಗಳನ್ನು ಮಾಡುವವರಿಗೆ ಮಾತ್ರವಲ್ಲ, ಸ್ವಸ್ಥ ಬೋಧನೆಗೆ ವಿರೋಧವಾಗಿ ನಡಿಯುವ ಪಾಪಿಷ್ಠರಿಗೆ ಸಹ ನ್ಯಾಯಪ್ರಮಾಣವು ವಿಧಿಸಲ್ಪಟ್ಟಿರುತ್ತದೆ.

8. ನನ್ನ ಊಳಿಗವನ್ನು ಮಾಡುವದಕ್ಕೆ ನನ್ನ ಮನಸ್ಸನ್ನು ಬಲ ಪಡಿಸಿದ ಕರ್ತನೆಂಬುವದೇ ಇದರ ತಾತ್ಪರ್ಯವು. (ಅಪೊ. ಕ್ರಿ. ೯. ೨೨.)

9. ಕ್ರಿಸ್ತನ ಶಿಷ್ಯರು ತಮ್ಮ ವಿಶ್ವಾಸವನ್ನು ಬೊಂಕುವಂತೆ ಬಲಾತ್ಕಾರ ಮಾಡಿದವನೆಂಬ ತಾತ್ಪರ್ಯವು. ಇಂಥಾ ಪಾಪಿಯನ್ನು ಗುಣಪಡಿಸಿ ತನ್ನ ಸಭೆಯಲ್ಲಿ ಮೇಲಾದ ಸೇವೆಗೆ ಏರ್ಪಡಿಸಿದ ದೇವರ ಕೃಪೆ ಅತಿಶಯವಾದದ್ದೇ. ಅದನ್ನು ಪೌಲನು ಗ್ರಹಿಸಿ ಮನಃಪೂರ್ವಕದಿಂದ ದೇವರನ್ನು ಸ್ತುತಿಸುತ್ತಾನೆ.

10. (ಲೂಕ. ೨೩. ೩೪. ಅಪೊ. ಕ್ರಿ. ೩. ೧೭. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.) ತನ್ನ ತಪ್ಪಿಗೆ ತನ್ನ ಅಜ್ಞಾನವು ಒಂದು ನೆವವಾಗಿ ಹೇಳದೆ, ಅಂಥವನಾಗಿರುವಾಗ ಅವನು ಕೃಪೆಯನ್ನು ಹೊಂದಿದ್ದಕ್ಕೆ ದೇವರ ಕನಿಕರವನ್ನು ಮಹಿಮೆ ಪಡಿಸುತ್ತಾನೆ. ಕರ್ತನ ಅಪರಿಮಿತ ಕೃಪೆಯಿಂದ ಅಜ್ಞಾನವು ನಿವರ್ತಿಯಾಗಿ ವಿಶ್ವಾಸವೂ ಪ್ರೀತಿಯೂ ಅವನಲ್ಲಿ ಸಂಪೂರ್ಣವಾಯಿತು.

11. ಪರಂಜ್ಯೋತಿಯಾದ ಕ್ರಿಸ್ತನಿಂದ ಪಾಪಾತ್ಮರಿಗೆ ರಕ್ಷಣೆ ಉಂಟಾಯಿತೆಂಬ ದಿವ್ಯ ಸತ್ಯವು ಸರ್ವ ಜನರಿಗೂ ಯಾವ ಆಕ್ಷೇಪಣೆಯೂ ತಡೆಯೂ ಇಲ್ಲದೆ ಅಂಗೀಕಾರ ಮಾಡ ತಕ್ಕ ವಿಷಯವಾಗಿದೆ. ದೇವರ ಮಹಾ ಕೃಪೆಯಿಂದ ಸ್ಥಾಪಿಸಲ್ಪಟ್ಟಂಥ ಮನುಷ್ಯರ ಸ್ಥಿತಿಗೆ ತಕ್ಕಂಥ ವಿಷಯವು ಅಂಗೀಕಾರಕ್ಕೆ ಯೋಗ್ಯವಾದದ್ದಾಗಿದೆ.

12. ಇದರಿಂದ ಪೌಲನ ಮನೋದೀನತ್ವವೂ ದೈವಯತ್ನವಾದ ದುಃಖವೂ ಚನ್ನಾಗಿ ತೋರುತ್ತದೆ. (ಎಫೆ. ೩. ೮—೧೧.) ಮನುಷ್ಯರ ರಕ್ಷಣಾರ್ಥವಾಗಿ ತನ್ನ ಪ್ರಾಣವನ್ನು ಕೊಡುವದಕ್ಕೆ ಮಹಿಮಾಸನವನ್ನು ಬಿಟ್ಟು ಭೂಮಿಯಲ್ಲಿ ಅವತರಿಸಿದ ಕ್ರಿಸ್ತನ ಕೃಪೆಯ ಬಾಹುಳ್ಯವನ್ನು ಪೌಲನು ಹೇಳಿದ ತರುವಾಯ ತನ್ನ ನೀಚತನವನ್ನೂ ಮಹಾ ಪಾತಕವನ್ನೂ ಗ್ರಹಿಸಿ, ನಾನು ಶ್ರೇಷ್ಠ ಪಾಪಿ ಎಂದು ಅರಿಕೆ ಮಾಡುತ್ತಾನೆ.

13. ಪ್ರಧಾನ ಪಾಪಿಗೆ ಕರುಣೆ ದೊರಕುವದಾದರೆ, ಮಿಕ್ಕಾದ ಪಾಪಿಷ್ಠರಿಗೂ ಆ ಕರುಣೆ ದೊರಕದೆ ಇರಲಾರದು. ಆದದರಿಂದ ಯಾವ ಪಾಪಿಯಾದರೂ ಸಂದೇಹ ಪಡ ಕೆಲಸವಿಲ್ಲ. ತನಗೆ ದೊರಕಿದ ಕೃಪೆಯನ್ನು ಗ್ರಹಿಸಿದ ಭಕ್ತನು, ನಿತ್ಯನಾಗಿ ಅಗೋಚರನಾಗಿ ಆಕಾಶಗಳನ್ನು ದಾಟಿ ಹೋದ ದೇವರ ಮಗನನ್ನು ಅತ್ಯಂತ ಭಕ್ತಿಯಿಂದ ಸ್ತುತಿಸುವನು. (೧೭. ವ.)



ಸಮಸ್ತ ದೀರ್ಘಶಾಂತಿಯನ್ನು ನಿತ್ಯಜೀವಕ್ಕಾಗಿ ಅವನ ಮೇಲೆ ವಿಶ್ವಾಸವಿಡಲಿರುವವರಿಗೆ ಮಾದರಿಯಾಗಿ
ತೋರಿಸುವ ಹಾಗೆ, ಇದಕ್ಕೋಸ್ಕರವೇ ಕರುಣಿಸಲ್ಪಟ್ಟೆನು.
೧೭ ಆದರೆ ನಿತ್ಯ ಅರಸನೂ, ನಿರ್ಲಯನೂ, ಅದೃಶ್ಯನೂ, ಒಬ್ಬನೇ ಜ್ಞಾನಿಯೂ, ಆಗಿರುವ ದೇವರಿಗೆ ಯುಗ
ಯುಗಾಂತರಗಳಿಗೂ ಘನವೂ ಮಹಿಮೆಯೂ ಆಗಲಿ. ಆಮೆನ್.
೧೮ ಮಗನಾದ ತಿಮೊಥೆಯನೇ, ನಿನ್ನ ಮೇಲೆ ಮುಂಚೆ ಹೇಳಿದ ಪ್ರವಾದನೆಗಳ ಪ್ರಕಾರ, [1]ಅವುಗಳಿಂದ [2]ಒಳ್ಳೇ
೧೯ ಯುದ್ಧವನ್ನು ನಡಿಸ ಬೇಕೆಂಬ ಈ ಆಜ್ಞೆಯನ್ನು ನಿನಗೆ ಒಪ್ಪಿಸುತ್ತೇನೆ. ವಿಶ್ವಾಸವನ್ನೂ ಒಳ್ಳೇ ಮನಸ್ಸಾ
ಕ್ಷಿಯನ್ನೂ ಕೈಕೊಂಡಿರು; ಇದನ್ನು ಕೆಲವರು [3]ಲಕ್ಷ್ಯ ಮಾಡದೆ, ವಿಶ್ವಾಸದ ವಿಷಯದಲ್ಲಿ ಹಡಗನಷ್ಟ
೨೦ ಪಟ್ಟರು. ಅವರಲ್ಲಿ [4]ಹುಮೆನಾಯನೂ, ಅಲೆಕ್ಸಾಂದ್ರನೂ, ಇದ್ದಾರೆ; ಅವರು ದೂಷಿಸದಿರ ಕಲಿತು ಕೊಳ್ಳುವ
ಹಾಗೆ, [5]ಅವರನ್ನು ಸೈತಾನನಿಗೆ ಒಪ್ಪಿಸಿದ್ದೇನೆ.

ದೇವಾರಾಧನೆಯನ್ನು ಕುರಿತ ಕಟ್ಟಳೆಗಳು; ಸ್ತ್ರೀಯರ ಉಡಿಗೆ ನಡತೆಗಳನ್ನು ಕುರಿತ ಕಟ್ಟಳೆಗಳು.

2. ಆದದರಿಂದ [6]ಎಲ್ಲಾದರ ಮೊದಲು, ಬಿನ್ನಹ ಪ್ರಾರ್ಥನೆ ವಿಜ್ಞಾಪನೆ ಸ್ತೋತ್ರಗಳನ್ನು, [7]ಎಲ್ಲಾ ಮನುಷ್ಯ
೨ ರಿಗೋಸ್ಕರವೂ, ಅರಸರಿಗೋಸ್ಕರವೂ, ಅಧಿಕಾರದಲ್ಲಿರುವವರೆಲ್ಲರಿಗೋಸ್ಕರವೂ, ನಾವು ಸಕಲ ಭಕ್ತಿಯಿಂ
ದಲೂ, [8]ಮರ್ಯಾದೆಯಿಂದಲೂ, ಶಾಂತವಾಗಿಯೂ, ಸಮಾಧಾನವಾಗಿಯೂ, ಕಾಲಕ್ಷೇಪ ಮಾಡುವ
೩ ಹಾಗೆ, ಮಾಡ ಬೇಕೆಂದು ಬುದ್ಧಿ ಹೇಳುತ್ತೇನೆ. ಯಾಕಂದರೆ ಸಕಲ ಮನುಷ್ಯರು ರಕ್ಷಿಸಲ್ಪಟ್ಟು, ಸತ್ಯದ
೪ ತಿಳುವಿಕೆಗೆ ಬರ [9]ಇಚ್ಛೈಸುವ ನಮ್ಮ ರಕ್ಷಕನಾದ ದೇವರ ಮುಂದೆ [10]ಇದು ಒಳ್ಳೇದೂ ಸಮರ್ಪಕವೂ

1. ಸಭೆಯಲ್ಲಿರುವ ತಪ್ಪುಗಳನ್ನು ತೊಲಗಿಸ ತಿಮೊಥೆಯನು ಕಟ್ಟಳೆ ಹೊಂದಿದ್ದನು. (೩.ವ.) ಅವನು ದೇವರ ಸೇವೆ ಮಾಡುವದಕ್ಕೆ ನೇಮಿಸಲ್ಪಟ್ಟಾಗ ಸಭೆಯಲ್ಲಿ ಉತ್ತಮನಾಗಿರುವನೆಂದು, ಆತ್ಮನ ವರಪ್ರಸಾದವನ್ನು ಹೊಂದಿದ ಪುಣ್ಯ ಪುರುಷರು ಪ್ರವಾದನೆ ಹೇಳಿರುವರು. ಅವನು ಅವುಗಳನ್ನು ಜ್ಞಾಪಕ ಮಾಡುವಾಗಲೆಲ್ಲಾ ಅದರಿಂದ ಬಲ ಹೊಂದಿ ಒಳ್ಳೇ ಹೋರಾಟ ಮಾಡ ಹೇತುವೆ ಇತ್ತು.

2. ಒಳ್ಳೇ ಯುದ್ಧವೆಂಬುವದಕ್ಕೆ ಮೂಲ ಭಾಷೆಯಲ್ಲಿ ಆ ಒಳ್ಳೇ ಯುದ್ಧವೆಂಬದಾಗಿ ಉಂಟು. (೨ತಿಮೊ. ೪. ೭. ವಚನದ ವ್ಯಾಖ್ಯಾನ ನೋಡ ಬೇಕು.) ಆ ಒಳ್ಳೇ ಯುದ್ಧವನ್ನು ಅವನು ತಕ್ಕ ಪ್ರಕಾರ ನಡಿಸುವನೆಂಬುವದನ್ನೇ, ಅವನು ದೇವಸೇವೆ ಹೊಂದಿದ ಕಾಲದಲ್ಲಿ ಪ್ರವಾದನೆಯಾಗಿ ತಿಳಿಸಲ್ಪಟ್ಟಿತೆಂದು ತೋರುತ್ತದೆ. (ಅಪೊ. ಕ್ರಿ. ೧೬. ೨.)

3. ಬೇಕಾಗಿ ಒಳ್ಳೇ ಮನಸ್ಸಾಕ್ಷಿಯನ್ನು ತಳ್ಳುವವರು ಸತ್ಯ ದ್ರೋಹಿಗಳಾಗಿರುವರೆಂಬುವದಕ್ಕೆ ಸಂದೇಹವಿಲ್ಲ.

4. ಹುಮೆನಾಯನು ಕಳ್ಳಬೋಧಕರಲ್ಲಿ ಶ್ರೇಷ್ಠನೆಂದು ತೋರುತ್ತದೆ. (೨ತಿಮೊ. ೨. ೧೭.) ಅಲೆಕ್ಸಾಂದ್ರನನ್ನು ಕುರಿತು ಅಪೊ. ಕ್ರಿ. ೧೯. ೩೩ಲ್ಲಿಯೂ, ೨ತಿಮೊ. ೪. ೧೪ಲ್ಲಿಯೂ ಹೇಳಿ ಇದೆ. ಇವನು ಆ ಅಲೆಕ್ಸಾಂದ್ರನೋ ಆ ಹೆಸರುಳ್ಳ ಬೇರೊಬ್ಬನೋ ತಿಳಿಯದು.

5. ಅವರು ದೂಷಿಸದಿರ ಕಲಿತು ಕೊಳ್ಳುವ ಹಾಗೆ ಪೌಲನು ಅವರನ್ನು ಸೈತಾನನಿಗೊಪ್ಪಿಸಿದನು. ಅವನು ಕಡೇ ಸಾರಿ ಎಫೆಸಕ್ಕೆ ಹೋದಾಗ ಒಂದು ವೇಳೆ ಹೀಗೆ ಮಾಡಿರುವನು. ಸೈತಾನನಿಗೆ ಒಪ್ಪಿಸುವದನ್ನು ಕುರಿತು, ೧ಕೊರಿ. ೫. ೫. ವಚನದ ವ್ಯಾಖ್ಯಾನ ನೋಡ ಬೇಕು.

6. ಈ ಸಂಧಿಯಲ್ಲಿ ಅರಸರು ಮೊದಲಾದ ಸಕಲ ಮನುಷ್ಯರಿಗೋಸ್ಕರವೂ ಪ್ರಾರ್ಥನೆ ಮಾಡ ಬೇಕೆಂದೂ, (೨. ೧—೩.) ಇದೇ ಬಹು ಜನರ ಮೇಲನ್ನು ಕೋರುವ ಸುವಾರ್ತೆಯ ಗುರಿ ಎಂದೂ, (೪—೭. ವ.) ಸಕಲ ಸ್ಥಳಗಳಲ್ಲಿಯೂ ಸಕಲ ಜನರೂ ಹೀಗೆಯೇ ಮಾಡ ಬೇಕೆಂದೂ (೮. ವ.) ತೋರಿಸಿ, ಸ್ತ್ರೀಯರ ಉಡಿಗೆ ನಡತೆಗಳು ಎಂಥವುಗಳಾಗಿರ ಬೇಕೆಂದೂ, (೯—೧೫. ವ.) ಅಧ್ಯಕ್ಷರ ಗುಣಾತಿಶಯಗಳೂ (೩. ೧—೭.) ಸಭೇ ಸಹಾಯಕರ ಗುಣಾತಿಶಯಗಳೂ (೮—೧೩. ವ.) ಎಂಥವುಗಳಾಗಿರ ಬೇಕೆಂದೂ ವಿವರಿಸಿ, ಸಭೆಯ ಶ್ರೇಷ್ಠತ್ವವನ್ನೂ ಸುವಾರ್ತೆಯ ಮಹಿಮೆಯನ್ನೂ ವಿವರಿಸಿರುತ್ತದೆ. (೧೪—೧೬. ವ.)

7. ಭಕ್ತರು ಕೂಡಿರುವ ಸಭೆಯಲ್ಲಿ ಭಕ್ತರಿಗೋಸ್ಕರ ಮಾತ್ರವಲ್ಲ, ಎಲ್ಲಾ ವಿಧವಾದ ಜನರಿಗೋಸ್ಕರ ಪ್ರಾರ್ಥಿಸ ಬೇಕು. ಈ ಪ್ರಾರ್ಥನೆಗಳ ಸಂಗಡ ಯಾವಾಗಲೂ ಸ್ತೋತ್ರವು ಕಲತಿರ ಬೇಕು.

8. ಪರಮ ಅರಸನಾದ ಕ್ರಿಸ್ತನ ದಾಸರು ಲೋಕದ ಅರಸರನ್ನು ಸಹ ಲಕ್ಷ್ಯವಿಟ್ಟು ಅವರಿಗೋಸ್ಕರ ಪ್ರಾರ್ಥನೆ ಮಾಡುವರು. ಅವರು ಯಾವ ಮತಸ್ಥರಾಗಿದ್ದಾಗ್ಯೂ, ಅದನ್ನು ಎಣಿಸದೆ ಅವರಿಗೋಸ್ಕರ ಪ್ರಾರ್ಥಿಸಿದರೆ, ನಮ್ಮ ಜೀವಕಾಲವನ್ನು ಕಲಹವಿಲ್ಲದೆ ಶಾಂತವಾಗಿಯೂ, ದೇವಭಕ್ತಿಯಿಂದಲೂ ಒಳ್ಳೇ ಕ್ರಮದಿಂದಲೂ ಕಾಲಕ್ಷೇಪ ಮಾಡುವ ಹಾಗೆ ದೇವರು ಅನುಗ್ರಹಿಸುವನು.

9. ಸಮಸ್ತ ಜನರೂ ಸುವಾರ್ತೆಯನ್ನು ನಂಬಿ ರಕ್ಷಣೆಯನ್ನು ಹೊಂದುವದು ದೇವರ ಚಿತ್ತವಾಗಿರುವದರಿಂದ, ಭಕ್ತರು ಸಮಸ್ತ ಜನರಿಗೋಸ್ಕರವೂ ಪ್ರಾರ್ಥಿಸ ಹಂಗುಳ್ಳವರಾಗಿದ್ದಾರೆ. ಅದರಿಂದಲೇ ದೇವರು ಒಬ್ಬನೆಂದೂ, ಮಧ್ಯಸ್ಥನು ಒಬ್ಬನೇ ಎಂದೂ, ೫, ೬ನೇ ವಚನಗಳಲ್ಲಿರುವ ಸತ್ಯವು ಸರ್ವರಿಗೂ ಸಾರಲ್ಪಡುತ್ತದೆ. ಮನುಷ್ಯರೆಲ್ಲರೂ ಒಬ್ಬನೇ ಮಧ್ಯಸ್ಥನಾದ ಕ್ರಿಸ್ತನ ಪುಣ್ಯದ ಮೂಲಕವಾಗಿ ದೇವರ ಬಳಿಗೆ ಹೋದರೇನೆ ಪಾಪಕ್ಷಮೆಯನ್ನೂ ದೇವರ ಕೃಪೆಯನ್ನೂ ಹೊಂದುವರು. ಬೇರೆ ಮಾರ್ಗವೇನೂ ಇಲ್ಲ.

10. "ಇದು" ಎಂಬುವದು ಮತ್ತೊಬ್ಬರಿಗೋಸ್ಕರ ಮಾಡುವ ಪ್ರಾರ್ಥನೆಯನ್ನು ಕುರಿತದ್ದು. (೧, ೨. ವ.)

೫ ಆಗಿದೆ. ಯಾಕಂದರೆ ದೇವರು ಒಬ್ಬನು; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನು—[1]ಮನುಷ್ಯ
೬ ನಾದ ಕ್ರಿಸ್ತ ಯೇಸುವೇ. ಇವನು ತನ್ನನ್ನು ಎಲ್ಲರಿಗೋಸ್ಕರ ಓಲಾಗಿ ಕೊಟ್ಟಿದ್ಧಾನೆ; ಇದು ತಕ್ಕ ಕಾಲ
೭ ಗಳಲ್ಲಿ ಸಾಕ್ಷಿಯಾಗಿರುವದು. ಅದಕ್ಕೆ ನಾನು ಸಾರುವವನಾಗಿಯೂ, ಅಪೊಸ್ತಲನಾಗಿಯೂ, ವಿಶ್ವಾಸದ
ಲ್ಲಿಯೂ ಸತ್ಯದಲ್ಲಿಯೂ ಜನಾಂಗಗಳ ಬೋಧಕನಾಗಿಯೂ, ನೇಮಿಸಲ್ಪಟ್ಟೆನು. ಸುಳ್ಳಾಡದೆ, ಕ್ರಿಸ್ತನಲ್ಲಿ
೮ ಸತ್ಯವನ್ನು ಹೇಳುತ್ತೇನೆ. ಹಾಗಾದರೆ, [2]ಗಂಡಸರು ಎಲ್ಲಾ ಸ್ಥಳಗಳಲ್ಲಿ ಕೋಪವೂ [3]ಸಂಶಯವೂ ಇಲ್ಲದೆ,
ಪವಿತ್ರವಾದ ಕೈಗಳನ್ನು ಎತ್ತಿ, ಪ್ರಾರ್ಥಿಸ ಬೇಕೆಂದಿದ್ಧೇನೆ.
೯ ಅದೇ ಪ್ರಕಾರ ಹೆಂಗಸರು ತಕ್ಕ ಉಡುಪು ಉಟ್ಟು ಕೊಂಡು, [4]ಜಡೆ ಚಿನ್ನ ರತ್ನ ಅಮೂಲ್ಯ ವಸ್ತ್ರಗಳಿಂದಲ್ಲ,
೧೦ ಭಕ್ತಿಯನ್ನು ಅರಿಕೆ ಮಾಡುವ ಹೆಂಗಸರಿಗೆ ತಕ್ಕ ಹಾಗೆ ಸತ್ಕ್ರಿಯೆಗಳಿಂದಲೇ, ನಾಚಿಕೆಯೂ ಮನಃಸ್ವಸ್ಥವೂ
೧೧ ಉಳ್ಳವರಾಗಿ, ತಮ್ಮನ್ನು ಅಲಂಕರಿಸಿ ಕೊಳ್ಳಲಿ. ಹೆಂಗಸು ಸಮಾಧಾನದಿಂದ ಪೂರ್ಣ ವಿಧೇಯಳಾಗಿ ಕಲಿ
೧೨ ತು ಕೊಳ್ಳಲಿ. ಆದರೆ ಬೋಧಿಸಲೂ, ಗಂಡಸನ್ನು ಸ್ವಾಧೀನ ಮಾಡಿ ಕೊಳ್ಳಲೂ ಅಲ್ಲ, ಸಮಾಧಾನದಿಂದಿರ
೧೩ ಬೇಕೆಂದು ಹೆಂಗಸಿಗೆ ಆಜ್ಞಾಪಿಸುತ್ತೇನೆ. ಯಾಕಂದರೆ ಆದಮನು ಮೊದಲು ರೂಪಿಸಲ್ಪಟ್ಟನು; ಆ ಮೇಲೆ
೧೪ ಹವ್ವಳು. ಮತ್ತು ಆದಮನು ಮೋಸ ಹೋಗಲಿಲ್ಲ; ಆದರೆ ಹೆಂಗಸು [5]ಮೋಸ ಹೋಗಿ, ಮಿಾರುವವ
೧೫ ಳಾದಳು. ಆದರೆ ವಿಶ್ವಾಸದಲ್ಲಿಯೂ, ಪ್ರೀತಿಯಲ್ಲಿಯೂ, ಶುದ್ಧತ್ವದಲ್ಲಿಯೂ, ಮನಃಸ್ವಸ್ಥ ಸಹಿತವಾಗಿ,
ನೆಲೆಯಾಗಿದ್ದರೆ, [6]ಮಕ್ಕಳನ್ನು ಹೆರುವದರಿಂದ ರಕ್ಷಿಸಲ್ಪಡುವಳು.

1. ಕ್ರಿಸ್ತನು ಮನುಷ್ಯಸ್ವಭಾವದ ಪ್ರಕಾರ ಮನುಷ್ಯರಿಗೆ ಸಮ್ಮಂಧ ಪಟ್ಟಿರುವ ಕಾರಣ ಸಮಸ್ತ ಮನುಷ್ಯರನ್ನು ಕುರಿತು ಮಾತಾಡುವಾಗ ಆತನ ಮನುಷ್ಯತ್ವವನ್ನು ಮುಖ್ಯವಾಗಿ ತೋರಿಸಿ ಇದೆ. ಸ್ವಭಾವದಲ್ಲಿಯೂ ಕ್ರಿಯೆಯಲ್ಲಿಯೂ ಒಂದಾಗಿರುವ ದೇವರ ಸಂಗಡ ದೈವಸ್ವಭಾವದಿಂದ ಅವನು ಸಮ್ಮಂಧ ಪಟ್ಟಿರುವ ಪ್ರಕಾರ ಮನುಷ್ಯತ್ವದಿಂದ ಮನುಷ್ಯರಿಗೆ ಸಮ್ಮಂಧ ಪಟ್ಟಿದ್ಧಾನೆ. ಹೀಗೆ ದೈವಮನುಷ್ಯನಾದ ಒಬ್ಬನೇ ಮಧ್ಯಸ್ಥನು ಮನುಷ್ಯರಿಗೆ ಬೇಕಾಗಿದೆ. ಈತನೇ ಸಮಸ್ತರಿಗೆ ಓಲಾಗಿ ತನ್ನನ್ನು ಒಪ್ಪಿಸಿದನು. ಓಲು ಅಂದರೆ, ಒಬ್ಬರಿಗೆ ಬದಲಾಗಿ ತನ್ನನ್ನು ಒಪ್ಪಿಸುವದು. ಹೀಗೆ ಕ್ರಿಸ್ತನು ಮನುಷ್ಯರಿಗೆ ಬದಲಾಗಿ ತನ್ನ ಪ್ರಾಣ ಕೊಟ್ಟನು. ಈ ಸತ್ಯವು ದೇವರು ನೇಮಿಸಿದ ಕಾಲದಲ್ಲಿ ಲೋಕದವರಿಗೆ ಸಾರಿ ಹೇಳಲ್ಪಟ್ಟಿತು.

2. ಗಂಡಸರು ಸಭೆಗಳಲ್ಲಿ ಪ್ರಾರ್ಥನೆ ಮಾಡ ತಕ್ಕದ್ದು. ಸ್ತ್ರೀಯರು ಆರಾಧನೆಯಲ್ಲಿ ಡಂಭವಿಲ್ಲದ ಉಡಿಗೆಯುಳ್ಳವರಾಗಿ ಮೌನವಾಗಿರ ತಕ್ಕದ್ದು.

3. ಪ್ರಾರ್ಥನೆ ಮಾಡುವಾಗ ಮನುಷ್ಯರ ವಿಷಯದಲ್ಲಿ ಕೋಪವಿಲ್ಲದೆ ಪ್ರೀತಿಯಾಗಿರ ಬೇಕಾದ ಪ್ರಕಾರ, ದೇವರ ವಿಷಯ ಸಂಶಯವಿಲ್ಲದೆ ಭಕ್ತಿಯಿಂದ ಪ್ರಾರ್ಥಿಸ ಬೇಕು. (ಫಿಲಿ. ೨. ೧೬.) ಪವಿತ್ರವಾದ ಕೈಗಳನ್ನೆತ್ತಿ ಪ್ರಾರ್ಥಿಸ ಬೇಕೆಂಬುವದು, ಪ್ರಾರ್ಥಿಸ ತಕ್ಕ ನೆಲೆಯನ್ನೂ (ಲೂಕ. ೧೮. ೧೩.) ಮನಸ್ಸಾಕ್ಷಿಯ ಯಥಾರ್ಥವನ್ನೂ (ಕೀರ್ತ. ೬೬. ೧೮.) ತೋರಿಸುತ್ತದೆ. ತ್ರಿಕರಣಶುದ್ಧಿಯಿಂದ ಮಾಡುವ ಪ್ರಾರ್ಥನೆಯೇ ಯಥಾರ್ಥವಾದದ್ದು.

4. ಜಡೆ ಅಂದರೆ ಕೂದಲನ್ನು ಹೆಣಿಯುವದು. (೧ ಪೇತ್ರ. ೩. ೩.) ಏಷ್ಯ ಖಂಡದ ಸ್ತ್ರೀಯರು ಕೂದಲು ಹೆಣಿಯುವದರಲ್ಲಿಯೂ ಆಭರಣಾದಿಗಳಿಂದ ತಲೆ ಶರೀರಗಳನ್ನು ಅಲಂಕರಿಸುವದರಲ್ಲಿಯೂ ಹಣವನ್ನೂ ಕಾಲವನ್ನೂ ವ್ರಯ ಮಾಡುತ್ತಾರೆಂದು ಎಲ್ಲರಿಗೂ ತಿಳಿದ ಸಂಗತಿಯೇ. ಹೀಗೆ ಮಾಡುವದು ಲೌಕಿಕ ಮನಸ್ಸನ್ನು ತೋರಿಸುತ್ತದೆ. ಲೌಕಿಕ ಮನಸ್ಸು ದೇವರಿಗೆ ವಿರೋಧವಾಗಿದೆ. ಕ್ರೈಸ್ತ ಹೆಂಗಸರು ಹೀಗೆ ಮಾಡುವದು ಬಡವರನ್ನು ನಾಚಿಕೆ ಪಡಿಸುವ ದುಷ್ಪದ್ಧತಿಯಾಗಿರುವದಲ್ಲದೆ ಉಬ್ಬಿ ಗರ್ವಪಡುವದಕ್ಕೆ ಸಹ ಹೇತುವೆಯಾಗಿರುತ್ತದೆ. ಆದದರಿಂದ ದೇವರಿಗೆ ಮೆಚ್ಚಿಕೆಯಾದ ಸುಗುಣ ಸುನಡತೆಗಳೇ ಶ್ರೇಷ್ಠಾಲಂಕಾರವು.

5. ಸ್ತ್ರೀಯು ಸಭೆಯಲ್ಲಿ ಬೋಧಿಸದೆ ಪುರುಷನಿಗೆ ಅಡಗಿ ಕ್ರಮವಾಗಿ ನಡಿಯುವದಕ್ಕೆ ಈ ವಚನದಲ್ಲಿ ಎರಡು ನ್ಯಾಯಗಳು ಹೇಳಲ್ಪಟ್ಟವೆ. ಪುರುಷನು ಮೊದಲು ರೂಪಿಸಲ್ಪಟ್ಟದ್ದು ಒಂದು; ಅವನಿಗೆ ಸಹಾಯಕಳಾಗಿ ಹಿಂದೆ ಸೃಷ್ಟಿಸಲ್ಪಟ್ಟ ಸ್ತ್ರೀಯು ಮೊದಲು ಪಾಪ ಮಾಡಿದ್ದು ಒಂದು. ಆದಮನು ಪಾಪ ಮಾಡಿದಾಗ್ಯೂ, ಅವನು ಹವ್ವಳ ಇಚ್ಛಕ ಮಾತುಗಳಿಗೆ ಸಮ್ಮತಿಸಿ ಪಾಪ ಮಾಡಿದನು. ಹವ್ವಳ ಹಾಗೆ ಪಿಶಾಚನ ವಂಚನೆಗೆ ಪೂರ್ಣವಾಗಿ ಸಮ್ಮತಿಸಿ ಪಾಪ ಮಾಡಲಿಲ್ಲ.

6. ಸ್ತ್ರೀಯು ಪಾಪ ಮಾಡಿದಾಗ ಅವಳಿಗೆ ಬಂದ ಶಾಪವೂ, ಅವಳಿಗೆ ಕೊಡಲ್ಪಟ್ಟ ಕೃಪೆಯ ವಾಗ್ದತ್ತವೂ ಅವಳು ಮಕ್ಕಳ ಹೆರುವಿಕೆಯನ್ನು ಅನುಸರಿಸಿತ್ತು. ಅದು ಅವಳಿಗೆ ವೇದನೆ ಕೊಡುವಂಥಾದ್ದಾಗಿತ್ತು. (ಉತ್ಪ. ೩. ೧೬.) ಮತ್ತು ಅವಳ ಬೀಜದಿಂದ ಲೋಕಕ್ಕೆ ರಕ್ಷಣೆ ಉಂಟಾಯಿತು. (ಉತ್ಪ. ೩. ೧೫.) ಆದದರಿಂದ ಹಿಂದೆ ಪಾಪ ಮಾಡಿದ ಪುರುಷನಿಗೆ ದೊರಕುವ ಪ್ರಕಾರವೇ ಮುಂದೆ ಪಾಪ ಮಾಡಿದ ಸ್ತ್ರೀಗೂ ಆ ರಕ್ಷಣೆಯಲ್ಲಿ ಪೂರ್ಣ ಸ್ವತಂತ್ರ ಉಂಟಾಗಿರುತ್ತದೆ. ಸ್ವಸ್ಥ ಬುದ್ಧಿಯಿಂದ ವಿಶ್ವಾಸದಲ್ಲಿಯೂ ಪ್ರೀತಿಯಲ್ಲಿಯೂ ಪರಿಶುದ್ಧತ್ವದಲ್ಲಿಯೂ ನೆಲೆಯಾಗಿರುವ ಉತ್ತಮ ಸ್ತ್ರೀಯರು ಸ್ತ್ರೀಬೀಜವಾದ ಕ್ರಿಸ್ತನಿಂದ ನಿತ್ಯಾನಂದ ಪದವಿಯನ್ನು ಹೊಂದುವರೆಂಬುವದಕ್ಕೆ ಸಂಶಯವಿಲ್ಲ.



ಅಧ್ಯಕ್ಷರ ಸಭೆಯ ಸೇವಕರ ಗುಣ ಲಕ್ಷಣಗಳು; ಸಭೆಯ ಮಹತ್ವ; ಸುವಾರ್ತೆಯ ಮಹಿಮೆ.

3. [1]ಒಬ್ಬನು ಅಧ್ಯಕ್ಷತ್ವವನ್ನು ಅಪೇಕ್ಷಿಸಿದರೆ, ಒಳ್ಳೇ ಕೆಲಸವನ್ನು ಅಪೇಕ್ಷಿಸುತ್ತಾನೆಂಬ ಮಾತು ನಿಜವೇ.
೨ ಹಾಗಾದರೆ, ಅಧ್ಯಕ್ಷನು ದೋಷವಿಲ್ಲದವನೂ, [2]ಒಬ್ಬಳೇ ಹೆಂಡತಿಯ ಗಂಡನೂ, ಎಚ್ಚರಿಕೆಯುಳ್ಳವನೂ,
೩ ಮನಃಸ್ವಸ್ಥನೂ, ಮರ್ಯಾದಸ್ಥನೂ, ಆತಿಥ್ಯಪ್ರಿಯನೂ, ಬೋಧಿಸ ಶಕ್ತನೂ, ಆಗಿರ ಬೇಕು. ಮದ್ಯ
ಪಾನಿಯೂ, [3]ಹೊಡದಾಡುವವನೂ, ಲೋಭಿಯೂ ಆಗಿರದೆ, ಶಾಂತನೂ, ಜಗಳವಿಲ್ಲದವನೂ, ದ್ರವ್ಯಾಶೆ
೪ ಯಿಲ್ಲದವನೂ, ಸ್ವಂತ ಮನೆಯನ್ನು ಚನ್ನಾಗಿ ಆಳುವವನೂ, [4]ಎಲ್ಲಾ ಘನದಿಂದ [5]ಮಕ್ಕಳನ್ನು ವಿಧೇಯ
೫ ರಾಗಿ ನಡಿಸುವವನೂ, ಆಗಿರ ಬೇಕು. ಯಾಕಂದರೆ, ಒಬ್ಬನು ಸ್ವಂತ ಮನೆಯನ್ನು ಆಳ ತಿಳಿಯದಿದ್ದರೆ,
೬ ದೇವರ ಸಭೆಯ ವಿಚಾರಣೆ ಹ್ಯಾಗೆ ಮಾಡುವನು? ಅವನು ಒಂದು ವೇಳೆ ಗರ್ವ ಪಟ್ಟು, ಪಿಶಾಚನ ಆಜ್ಞೆ
೭ ಯೊಳಗೆ ಬೀಳದ ಹಾಗೆ, [6]ಹೊಸಬನಾಗಿರ ಬಾರದು. ಮತ್ತು ಪಿಶಾಚನ ನಿಂದೆಯಲ್ಲಿಯೂ [7]ಉರುಲಿ
ನಲ್ಲಿಯೂ ಬೀಳದ ಹಾಗೆ, ಅವನು ಹೊರಗಿನವರಿಂದ ಒಳ್ಳೇ ಸಾಕ್ಷಿ ಹೊಂದಿದವನಾಗಿರ ಬೇಕು.
೮ ಅದೇ ಪ್ರಕಾರ ಸೇವಕರು ಎರಡು ನಾಲಿಗೆಯುಳ್ಳವರೂ, ಬಹಳ ದ್ರಾಕ್ಷೇ ರಸದ ಅಭ್ಯಾಸವುಳ್ಳವರೂ, ಲೋ
೯ ಭಿಗಳೂ ಆಗಿರದೆ, ಘನವುಳ್ಳವರಾಗಿದ್ದು, ವಿಶ್ವಾಸದ [8]ಮರ್ಮವು ಶುದ್ಧ ಮನಸ್ಸಾಕ್ಷಿಯಲ್ಲಿ ಉಂಟಾದವರಾ
೧೦ ಗಿರ ಬೇಕು. ಇವರು ಸಹ ಮೊದಲು ಪರೀಕ್ಷಿಸಲ್ಪಡಲಿ; ತರುವಾಯ ನಿರಪರಾಧಿಗಳಾಗಿದ್ದರೆ, ಸೇವಕರಾಗಲಿ.
೧೧ ಅದೇ ಪ್ರಕಾರ ಅವರ [9]ಹೆಂಡತಿಯರು ಚಾಡಿಗಾರ್ತಿಗಳಾಗಿರದೆ, ಘನವುಳ್ಳವರೂ, ಎಚ್ಚರಿಕೆಯುಳ್ಳವರೂ,
೧೨ ಎಲ್ಲಾದರಲ್ಲಿ ನಂಬಿಕೆಯುಳ್ಳವರೂ, ಆಗಿರಲಿ. ಸೇವಕರು [10]ಒಬ್ಬಳೇ ಹೆಂಡತಿಯ ಗಂಡರೂ, ಮಕ್ಕಳನ್ನೂ
೧೩ ಸ್ವಂತ ಮನೆಗಳನ್ನೂ ಚನ್ನಾಗಿ ಆಳುವವರೂ ಆಗಿರಲಿ. ಯಾಕಂದರೆ ಚನ್ನಾಗಿ ಸೇವೆ ಮಾಡಿದವರು ತಮಗೆ

1. (ಫಿಲಿ. ೧. ೧. ವಚನದ ವ್ಯಾಖ್ಯಾನ ನೋಡ ಬೇಕು.) ಆದಿ ಸಭೆಯಲ್ಲಿದ್ದ ಗುರುಗಳಿಗೆ ಕೆಲವು ಸಾರಿ ಅಧ್ಯಕ್ಷರೆಂದೂ ಕೆಲವು ಸಾರಿ ಹಿರಿಯರೆಂದೂ ಹೇಳುವ ಪದ್ಧತಿ ಇತ್ತು. (ಅಪೊ. ಕ್ರಿ. ೧೪. ೨೩; ೨೦. ೧೭, ೨೮. ತೀತ. ೧. ೫, ೭.) ಅಧ್ಯಕ್ಷನೆಂಬುವದರಲ್ಲಿ ಬೋಧಕರ ಹಂಗನ್ನೂ, ಹಿರಿಯರೆಂಬುವದರಲ್ಲಿ ಅವರ ಉದ್ಯೋಗದ ಶ್ರೇಷ್ಠತ್ವವನ್ನೂ ಸೂಚಿಸುತ್ತವೆಂದು ಹೇಳಬಹುದು.

2. ಒಳ್ಳೇ ಕೆಲಸವಾದ ಬೋಧಕೋದ್ಯೋಗವನ್ನು ಅಪೇಕ್ಷಿಸುವವನು ಯಾವ ಕಳಂಕವೂ ಇಲ್ಲದೆ ಯಥಾರ್ಥ ನಡತೆಯುಳ್ಳವನಾಗಿ ಇರುವದಲ್ಲದೆ "ಒಬ್ಬಳೇ ಹೆಂಡತಿಯ ಗಂಡನಾಗಿಯೂ ಇರ ಬೇಕು." ಆ ಕಾಲದಲ್ಲಿದ್ದ ಅನೇಕ ಯೆಹೂದ್ಯರು ಅಜ್ಞಾನರು ಮುಂತಾದವರ ಹಾಗೆ ಹಲವು ಸ್ತ್ರೀಯರನ್ನು ಮದುವೆ ಮಾಡಿ ಕೊಳ್ಳದೆಯೂ, ತಕ್ಕ ಕಾರಣವಿಲ್ಲದೆ ಒಬ್ಬಳನ್ನು ತಳ್ಳಿ ಮತ್ತೊಬ್ಬಳನ್ನು ಮದುವೆ ಮಾಡಿ ಕೊಳ್ಳದೆಯೂ, ಒಬ್ಬಳೇ ಹೆಂಡತಿಯ ಗಂಡನಾಗಿರುವದು ಉತ್ತಮ ಬೋಧಕನ ಲಕ್ಷಣ.

3. ಮದ್ಯಪಾನಾಪೇಕ್ಷಿತನು ಹೊಡದಾಡುವವನಾಗಿರುವನು. ೨ನೇ ವಚನದಲ್ಲಿ ಬೋಧಕನಿಗೆ ಇರ ತಕ್ಕ ಗುಣಗಳನ್ನೂ, ಈ ವಚನದಲ್ಲಿ ಅವನಿಗೆ ಇರ ಬಾರದ ಗುಣಗಳನ್ನೂ, ೪ನೇ ವಚನದಲ್ಲಿ ತಿರಿಗಿ ಅವನು ಎಂಥವನಾಗಿರ ಬೇಕೆಂದೂ ತೋರಿಸಿ ಇದೆ. ಇವೆಲ್ಲಾ ಸ್ಪಷ್ಟವಾಗಿರುವ ಕಾರಣ ಇವುಗಳನ್ನು ವಿವರಿಸ ಅವಶ್ಯವಿಲ್ಲ.

4. ಮಕ್ಕಳನ್ನು ಒಳ್ಳೇ ಕ್ರಮದಲ್ಲಿ ನಡಿಸುವದಕ್ಕೆ ಹೆತ್ತವರು ಒಳ್ಳೇ ನಡತೆಯೂ ಕ್ರಮವೂ ಉಳ್ಳವರಾಗಿರ ಬೇಕು. ಹೀಗೆ ತಮ್ಮ ಮನೆಯನ್ನು ಸುಕ್ರಮದಲ್ಲಿ ನಡಿಸುವದಕ್ಕೆ ತಿಳಿಯದ ಬೋಧಕರು ದೇವರ ಕುಟುಂಬವಾದ ಸಭೆಯನ್ನು ಹ್ಯಾಗೆ ಆಳಿ ಕ್ರಮ ಪಡಿಸುವರು?

5. ಕ್ರಿಸ್ತನ ಮಾರ್ಗದ ಬೋಧಕರು ಮದುವೆ ಮಾಡಿ ಕೊಂಡು ಮಕ್ಕಳು ಮುಂತಾದ ತಮ್ಮ ಕುಟುಂಬಗಳನ್ನು ಒಳ್ಳೇ ಕ್ರಮದಲ್ಲಿ ನಡಿಸ ಬೇಕೆಂದೂ, ಪಾಪು ಮಾರ್ಗದವರ ಹಾಗೆ ಮದುವೆ ಇಲ್ಲದೆ ವಿರಕ್ತರಾಗಿರ ಅವಶ್ಯವಿಲ್ಲವೆಂದೂ ಇದರಿಂದ ತಿಳಿಯಬಹುದು.

6. ಹೊಸದಾಗಿ ಗುಣ ಪಟ್ಟು ಶಿಷ್ಯನಾದವನು ಇಂಥಾ ಘನವಾದ ಸೇವೆಯನ್ನು ಹೊಂದಿದರೆ, ಅವನು ಗರ್ವ ಪಟ್ಟು, ಗರ್ವದಿಂದ ಪಿಶಾಚನಿಗೆ ಪ್ರಾಪ್ತಿಸಿದ ದಂಡನೆಗೆ ಒಂದು ವೇಳೆ ಒಳಗಾಗುವನು. ಗರ್ವವೆಂಬ ಹೊಗೆಯಿಂದ ಅವನ ಕಣ್ಣು ಮೊಬ್ಬಾಗುವದು.

7. ಹೊರಗಿನವರು ಅವನ ಬೋಧನೆಯನ್ನು ನಿಂದಿಸಲೂ, ಅವನ ಸೇವೆ ವ್ಯರ್ಥವಾಗಲೂ, ಅವನಿಂದ ಸಭೆಗೆ ನಷ್ಟವಾಗಲೂ ತಕ್ಕ ಹಾಗೆ ಪಿಶಾಚನ ಉರ್ಲಿನಲ್ಲಿ ತಿಕ್ಕದೆ ಇರ ಬೇಕು. ಮೇಯಿಸುವವನು ಮಾರ್ಗ ತಪ್ಪಿದರೆ, ಮಂದೆಯ ಸ್ಥಿತಿ ದೌರ್ಭಾಗ್ಯವೇ.

8. (ಮತ್ತಾ. ೧೩. ೧೧. ವಚನದ ವ್ಯಾಖ್ಯಾನ ನೋಡ ಬೇಕು.) ಅಧ್ಯಕ್ಷರ ಕೆಲಸವನ್ನು ವಿವರಿಸಿದ ತರುವಾಯ ಸಭೆಯ ಸೇವಕರ ಹಂಗುಗಳನ್ನು ವಿವರಿಸಿ ಇದೆ. ಅವರು ಒಳ್ಳೇ ನಡತೆಯೂ, ವಾಕ್ಶುದ್ಧಿಯೂ, ಮದ್ಯಪಾನನಿಷೇಧವೂ, ನಿರಾಶೆಯೂ ಉಳ್ಳವರಾಗಿರ ಬೇಕು. ವಿಶ್ವಾಸದ ಮರ್ಮವನ್ನು ಶುದ್ಧ ಮನಸ್ಸಾಕ್ಷಿಯಲ್ಲಿ ಕಾದು ಕೊಂಡು ಎಚ್ಚರಿಕೆಯಾಗಿರ ಬೇಕು.

9. ಸಭೆಯ ಸೇವಕರ ಹೆಂಡತಿಯರು ಎಂಥವರಾಗಿರ ಬೇಕೆಂದು ಇಲ್ಲಿ ಹೇಳಿ ಇದೆ. ಅವರು ಯೋಗ್ಯರಾಗಿಯೂ ಒಳ್ಳೇ ಮಾದ್ರಿ ತೋರಿಸುವವರಾಗಿಯೂ ಇರ ಬೇಕು.

10. ೨ನೇ ವಚನದ ವ್ಯಾಖ್ಯಾನ ನೋಡ ಬೇಕು.

[1]ಒಳ್ಳೇ ಬಿರುದನ್ನೂ, ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದಲ್ಲಿ ಬಹು ಧೈರ್ಯವನ್ನೂ, ಸಂಪಾದಿಸಿ ಕೊಳ್ಳು
ತ್ತಾರೆ.
೧೪, ೧೫ ನಿನ್ನ ಹತ್ತರ ಬೇಗ ಬರುವದಕ್ಕೆ ನಿರೀಕ್ಷಿಸಿ, ನಾನು ತಡ ಮಾಡಿದರೆ, ಸತ್ಯದ [2]ಸ್ತಂಭವೂ ಆಧಾರವೂ
ಆಗಿರುವ, ಜೀವವುಳ್ಳ ದೇವರ ಸಭೆಯಾದ, ದೇವರ ಮನೆಯಲ್ಲಿ ಹ್ಯಾಗೆ ನಡೆದು ಕೊಳ್ಳ ಬೇಕೆಂದು, ನೀನು
೧೬ ತಿಳಿದು ಕೊಳ್ಳುವ ಹಾಗೆ, ಇವುಗಳನ್ನು ನಿನಗೆ ಬರೆಯುತ್ತೇನೆ. ಭಕ್ತಿಯ ಮರ್ಮವು ಸಂದೇಹವಿಲ್ಲದೆ ದೊ
ಡ್ಡದಾಗಿದೆ—[3]ದೇವರು ಮಾಂಸದಲ್ಲಿ ಪ್ರತ್ಯಕ್ಷವಾಗಿ, ಆತ್ಮದಲ್ಲಿ ನೀತಿನಿರ್ಣಯ ಪಟ್ಟು, ದೂತರಿಗೆ ಕಾಣಿಸಿ
ಕೊಂಡು, ಜನಾಂಗಗಳಲ್ಲಿ ಸಾರಲ್ಪಟ್ಟು, ಲೋಕದಲ್ಲಿ ವಿಶ್ವಾಸಿಸಲ್ಪಟ್ಟು ಮಹಿಮೆಯಲ್ಲಿ ಎತ್ತಲ್ಪಟ್ಟನು.

ಕಡೇ ಕಾಲಗಳಲ್ಲಿ ಉಂಟಾಗುವ ತಿರುಗಿ ಬೀಳುವಿಕೆಯನ್ನು ಕುರಿತ ಪ್ರವಾದನೆ;
ನಂಬಿಕೆಯೂ ಜಾಗ್ರತೆಯೂ ಉಳ್ಳವನಾಗಿರ ಬೇಕೆಂದು ಆಜ್ಞಾಪಿಸಿದ್ದು.

**4.** [4]ಆದರೆ ಆತ್ಮವು ಸ್ಪಷ್ಟವಾಗಿ ಹೇಳುವದೇನಂದರೆ—ಕಡೇ ಕಾಲಗಳಲ್ಲಿ ಕೆಲವರು ವಿಶ್ವಾಸದಿಂದ ತಿರುಗಿ
೨ ಬಿದ್ದು, ಮೋಸಗೊಳಿಸುವ ಆತ್ಮಗಳಿಗೂ, [5]ದೆವ್ವಗಳ ಬೋಧನೆಗಳಿಗೂ, ಕಿವಿ ಕೊಡುವರು. ಅವರು ಕಪ
೩ ಟದಿಂದ ಸುಳ್ಳಾಡುವವರೂ, ಸ್ವಂತ ಮನಸ್ಸಾಕ್ಷಿಯಲ್ಲಿ ಬರೆ ಹಾಕಲ್ಪಟ್ಟವರೂ, [6]ಮದುವೆಗೆ ಅಡ್ಡಿ ಮಾ
ಡುವವರೂ, ಸತ್ಯವನ್ನು ತಿಳಿದ ವಿಶ್ವಾಸಿಗಳಿಂದ ಸ್ತೋತ್ರದ ಸಂಗಡ ಅನುಭವಿಸಲ್ಪಡುವದಕ್ಕೆ, ದೇವರು ಸೃ
೪ ಷ್ಟಿಸಿದ ಆಹಾರಗಳನ್ನು ಬಿಟ್ಟು ಬಿಡ ಬೇಕೆಂಬುವವರೂ ಆಗಿರುವರು. ಆದರೆ ದೇವರು ಸೃಷ್ಟಿಸಿದ್ದೆಲ್ಲಾ

1. ಉತ್ತಮರಾಗಿ ನಡಿಯುವ ಸಭೆಯ ಸೇವಕರು, ದೇವರ ಸಮುಖದಲ್ಲಿ ಮಾತ್ರವಲ್ಲ, ಸಭೆಯಲ್ಲಿಯೂ ಒಳ್ಳೇ ಅಂತಸ್ತನ್ನು ಅಥವಾ ಮೇಲಾದ ಸ್ಥಿತಿಯನ್ನು ಹೊಂದುವರು. (೬. ೧೯.)

2. ಲೋಕದಲ್ಲಿ ಸ್ಥಾಪಿಸಲ್ಪಟ್ಟಿರುವ ದೇವರ ಸಭೆಗಳು ದೇವರ ಸತ್ಯಕ್ಕೆ ಸಾಕ್ಷಿಯಾಗಿಯೂ ಆಧಾರವಾಗಿಯೂ ಇರುತ್ತವೆ.

3. "ದೇವರು" ಎಂಬುವದಕ್ಕೆ ಕೆಲವು ಕೈಬರಹ ಪ್ರತಿಗಳಲ್ಲಿ "ಅವನು" ಎಂದು ಇರುತ್ತದೆ. ಅವನು ಅಂದರೆ, ಕರ್ತನು. ಕ್ರಿಸ್ತನು ದೈವತ್ವವೂ ಮನುಷ್ಯತ್ವವೂ ಉಳ್ಳವನಾಗಿದ್ದಾನೆಂಬುವದು ಈ ವಚನದಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಜೀವವುಳ್ಳ ದೇವರಾದ ಆತನು ಮನುಷ್ಯದೇಹವನ್ನು ವಹಿಸಿ, ಮಾಂಸದಲ್ಲಿ ಪ್ರತ್ಯಕ್ಷವಾದನು. (ಯೋಹಾ. ೧. ೧೪.) ಆತನು ಕಳಂಕವಿಲ್ಲದ ಶುದ್ಧವಾದ ಸ್ಫಟಿಕಕ್ಕಿಂತಲೂ ನಿರ್ಮಲವಾದ ಶುದ್ಧಾಂಗವುಳ್ಳವನೆಂಬುವದು ಆತನ ಶರೀರದಲ್ಲಿ ಮಾತ್ರವಲ್ಲ, ಆತ್ಮದಲ್ಲಿಯೂ ಪ್ರಕಟವಾದದರಿಂದ ಆತ್ಮದಲ್ಲಿ ನೀತಿನಿರ್ಣಯ ಪಟ್ಟನು. ಆತನು ಅದ್ಭುತವಾಗಿ ಜನ್ಮಿಸಿದಾಗಲೂ, (ಲೂಕ. ೨. ೧೩, ೧೪.) ತನ್ನ ದಿವ್ಯ ಊಳಿಗವನ್ನು ಮಾಡ ಪ್ರಾರಂಭಿಸಿದಾಗಲೂ, (ಮತ್ತಾ. ೪. ೧೧.) ಮಹಿಮೆಯ ಸ್ವರೂಪನಾಗಿ ಸತ್ತವರೊಳಗಿಂದ ಜೀವಿತನಾಗಿ ಎದ್ದಾಗಲೂ ದೂತರಿಗೆ ಕಾಣಿಸಿ ಕೊಂಡನು. ಸಮಸ್ತ ಜನಾಂಗಗಳಲ್ಲಿ ಆತನ ವಾಕ್ಯವು ಸಾರಲ್ಪಟ್ಟಿತು. ನಾನು ಎತ್ತಲ್ಪಟ್ಟ ಮೇಲೆ ಎಲ್ಲರನ್ನು ನನ್ನ ಬಳಿಗೆ ಎಳಕೊಳ್ಳುವೆನೆಂದು ಆತನು ಕೊಟ್ಟ ವಾಗ್ದತ್ತದ ಪ್ರಕಾರ ಲೋಕದಲ್ಲಿ ವಿಶ್ವಾಸಿಸಲ್ಪಟ್ಟನು. ಆತನು ಶಿಲುಬೆಯ ಮೇಲೆ ತನ್ನ ಪುಣ್ಯ ಕ್ರಿಯೆಯನ್ನು ಮುಗಿಸಿ ಮೇಘಾರೂಢನಾಗಿ ಆಕಾಶಕ್ಕೇರಿದಾಗ ಮಹಿಮೆಯಲ್ಲಿ ಎತ್ತಲ್ಪಟ್ಟನು. ಇದು ಭಕ್ತಿಗೆ ಸಮ್ಮಂಧವಾದ ದೊಡ್ಡ ಮರ್ಮವೇ. ಈ ಮರ್ಮವನ್ನು ಗ್ರಹಿಸಿ ನಂಬುವವರು ಇಹದಲ್ಲಿ ಕೃಪೆಯನ್ನೂ ಪರದಲ್ಲಿ ಮಹಿಮೆಯನ್ನೂ ಹೊಂದುವರು.

4. ಸುಳ್ಳು ಬೋಧನೆಯಿಂದಲೂ, ಸೈತಾನನ ವಂಚನೆಯಿಂದಲೂ, ಸಭೆಯಲ್ಲಿ ಉಂಟಾಗುವ ತಿರುಗಿ ಬೀಳುವಿಕೆಯನ್ನು ಕುರಿತು ಪೌಲನು ಪ್ರವಾದನೆಯಾಗಿ ಹೇಳಿ, (೪. ೧—೫.) ಸಕಲ ಭಕ್ತಿಹೀನತ್ವಕ್ಕೆ ತೊಲಗಿ (೬—೧೧. ವ.) ದೇವರ ಸೇವೆಯನ್ನು ಯಥಾರ್ಥತ್ವದಿಂದ ಈಡೇರಿಸ ಬೇಕೆಂದು (೧೨—೧೬. ವ.) ತಿಮೊಥೆಯನಿಗೆ ಆಜ್ಞಾಪಿಸುತ್ತಾನೆ. ಸಭೆಯಲ್ಲಿರುವ ಹಿರಿಯರನ್ನೂ ವಿಧವೆಗಳನ್ನೂ ಮಿಕ್ಕಾದವರನ್ನೂ ಹ್ಯಾಗೆ ನಡಿಸ ಬೇಕೆಂದು ತೋರಿಸಿ, (೫. ೧—೨೫.) ಕ್ರೈಸ್ತರಾದ ದಾಸರು ಒಳ ಬಿದ್ದು ನಡಿಯ ಬೇಕೆಂದೂ, (೬. ೧, ೨.) ಸ್ವಸ್ಥ ಬೋಧನೆಗೆ ವಿರೋಧವಾಗಿ ನಡಿಯುವವರು ಇಂಥವರೆಂದೂ, (೩—೧೦. ವ.) ತಿಮೊಥೆಯನು ಪರಿಶುದ್ಧವಾಗಿಯೂ ಯಥಾರ್ಥವಾಗಿಯೂ ನಡಿಯ ಬೇಕೆಂದೂ (೧೧—೧೯. ವ.) ಹೇಳಿ, ಬುದ್ಧಿಮಾತುಗಳಿಂದ ಪತ್ರಿಕೆಯನ್ನು ಮುಗಿಸುತ್ತಾನೆ. (೨೦, ೨೧. ವ.)

5. ದೆವ್ವಗಳ ಬೋಧನೆಗಳು ಎಂಬುವದು, ಸತ್ತು ಹೋದವರ ಆತ್ಮಗಳನ್ನು ಕುರಿತ ಬೋಧನೆಗಳನ್ನಾದರೂ, ಕಳ್ಳಬೋಧಕರು ವಂಚನೆಯಾಗಿ ಬೋಧಿಸಿದ್ದೂ ಪಿಶಾಚಿಗಳಿಂದ ಉಂಟಾದದ್ದೂ ಆದ ಬೋಧನೆಗಳನ್ನಾದರೂ ತೋರಿಸುತ್ತದೆ. ಮನಸ್ಸಾಕ್ಷಿಯ ಗ್ರಹಿಕೆ ಇಲ್ಲದೆ ಬರೆ ಹಾಕಲ್ಪಟ್ಟ ಹೃದಯವುಳ್ಳ ವಂಚಕರಾದ ಗುರುಗಳು ತಮ್ಮನ್ನೂ ಮಿಕ್ಕಾದವರನ್ನೂ ವಂಚಿಸುವ ಹಾಗೆ ಸಂಭವಿಸುವದೇ ದೆವ್ವಗಳ ಬೋಧನೆಯ ಫಲವು. ಇದನ್ನು ಕುರಿತು ಆತ್ಮನು ರಹಸ್ಯವಾಗಿ ಅಲ್ಲ ಪ್ರಕಟವಾಗಿ ಹೇಳುತ್ತಾನೆ. (೧. ವ.)

6. ಮದುವೆ ಮಾಡಿ ಕೊಳ್ಳುವದಕ್ಕಿಂತ ವಿರಕ್ತರಾಗಿರುವದು ಶ್ರೇಷ್ಠ ಸ್ಥಿತಿ ಎಂದೂ, ಅದರಿಂದ ಪುಣ್ಯವುಂಟಾಗುವದೆಂದೂ, ಅನೇಕ ಕಳ್ಳಗುರುಗಳು ಬೋಧಿಸಿದರು.



೫ ಒಳ್ಳೇದು; ಮತ್ತು [1]ಸ್ತೋತ್ರ ಮಾಡಿ ತೆಗೆದು ಕೊಂಡರೆ, ಏನಾದರೂ ಬಿಸಾಡ ತಕ್ಕದ್ದಲ್ಲ. ಯಾಕಂದರೆ
ಅದು ದೇವರ ವಾಕ್ಯದಿಂದಲೂ ವಿಜ್ಞಾಪನೆಯಿಂದಲೂ [2]ಶುದ್ಧವಾಗುತ್ತದೆ.
೬ ಇವುಗಳನ್ನು ಸಹೋದರರಿಗೆ ಹೇಳಿ ಕೊಟ್ಟರೆ, [3]ನೀನು ಹಿಂಬಾಲಿಸಿದ ಸುಬೋಧನೆ ವಿಶ್ವಾಸಗಳ ವಾಕ್ಯಗ
೭ ಳಿಂದ ಪೋಷಿಸಲ್ಪಟ್ಟು, ಯೇಸು ಕ್ರಿಸ್ತನ ಒಳ್ಳೇ ಸೇವಕನಾಗಿರುವಿ. ಆದರೆ ಅಪಭ್ರಷ್ಟವಾದ [4]ಅಜ್ಜಿಕಥೆಗ
೮ ಳನ್ನು ತಳ್ಳಿ ಹಾಕಿ, ಭಕ್ತಿಯ ಅಭ್ಯಾಸ ಮಾಡಿಕೋ. ಯಾಕಂದರೆ, ಶರೀರದ ಅಭ್ಯಾಸವು [5]ಕೊಂಚಕ್ಕೆ
ಪ್ರಯೋಜನವಾದದ್ದು. ಆದರೆ ಭಕ್ತಿಯು ಎಲ್ಲಕ್ಕೂ ಪ್ರಯೋಜನವಾಗಿದೆ. ಅದಕ್ಕೆ ಇಹ ಪರ ಜೀವಗಳ
೯ ವಾಗ್ದತ್ತವು ಉಂಟು. [6]ಈ ವಾಕ್ಯವು ನಂಬಿಕೆಯಾಗಿಯೂ, ಎಲ್ಲಾ ಅಂಗೀಕಾರಕ್ಕೆ ಯೋಗ್ಯವಾಗಿಯೂ
೧೦ ಇರುತ್ತದೆ. ಯಾಕಂದರೆ ಮನುಷ್ಯರೆಲ್ಲರಿಗೂ, ಮುಖ್ಯವಾಗಿ ವಿಶ್ವಾಸಿಸುವವರಿಗೂ, ರಕ್ಷಕನಾಗಿರುವ
ಜೀವವುಳ್ಳ ದೇವರಲ್ಲಿ ನಿರೀಕ್ಷಿಸಿರುವದರಿಂದ, [7]ಅದಕ್ಕೋಸ್ಕರ ಕಷ್ಟವನ್ನೂ ನಿಂದೆಯನ್ನೂ ಪಡುತ್ತೇವೆ.
೧೧, ೧೨ ಇವುಗಳನ್ನು ಆಜ್ಞಾಪಿಸಿ ಬೋಧಿಸು. ನಿನ್ನ [8]ಯೌವನವನ್ನು ಯಾರೂ ಅಲಕ್ಷ್ಯ ಮಾಡದಿರಲಿ.
ಆದರೆ ಮಾತಿನಲ್ಲಿಯೂ, ನಡತೆಯಲ್ಲಿಯೂ, ಪ್ರೀತಿಯಲ್ಲಿಯೂ, ಆತ್ಮದಲ್ಲಿಯೂ, ವಿಶ್ವಾಸದಲ್ಲಿಯೂ, ನಿರ್ಮ
ಲತ್ವದಲ್ಲಿಯೂ, ವಿಶ್ವಾಸಿಗಳಿಗೆ ಮಾದರಿಯಾಗಿರು.
೧೩ [9]ಓದುವದರಲ್ಲಿಯೂ, ಬುದ್ಧಿ ಹೇಳುವದರಲ್ಲಿಯೂ, ಬೋಧನೆಯಲ್ಲಿಯೂ, ನಾನು ಬರುವ ಪರ್ಯಂತರ
೧೪ ಜಾಗ್ರತೆಯಾಗಿರು. ಹಿರಿಯರ ಸಭೆಯ ಕೈಯಿಡುವಿಕೆಯ ಸಂಗಡ ಪ್ರವಾದನೆಯಿಂದ ನಿನಗೆ ಕೊಡಲ್ಪ
೧೫ ಟ್ಟಂಥ, ನಿನ್ನಲ್ಲಿರುವ [10]ವರವನ್ನು ಅಲಕ್ಷ್ಯ ಮಾಡ ಬೇಡ. [11]ನಿನ್ನ ಅಭಿವೃದ್ಧಿಯು ಎಲ್ಲವುಗಳಲ್ಲಿ ತೋರುವ

1. ದೇವರು ದಯವಾಗಿ ಕೊಟ್ಟ ಮೇಲುಗಳನ್ನು ಸ್ತೋತ್ರದ ಸಂಗಡ ಅನುಭವಿಸುವದು ಒಳ್ಳೇದು. ಹಾಗೆ ಮಾಡದೆ ಲೋಕದ ಕಾರ್ಯಗಳನ್ನು ಅಲಕ್ಷ್ಯ ಮಾಡಿ, ಶರೀರ ದಂಡನೆ ಮಾಡಿ, ಸನ್ಯಾಸಿಗಳಾಗಿರುವವರು ದೇವರು ನೇಮಿಸಿದ ಸರಿಯಾದ ಸ್ಥಿತಿಯಲ್ಲಿದ್ದಾರೆಂದು ಹೇಳುವದಕ್ಕೆ ಹೇತುವಿಲ್ಲ.

2. ದೇವರು ಅನುಗ್ರಹಿಸುವ ಮೇಲುಗಳನ್ನು, ಆತನ ವಾಕ್ಯದ ಪ್ರಕಾರ (ಉತ್ಪ. ೧. ೨೯; ೯. ೩.) ಕೃತಜ್ಞತೆಯ ಮನಸ್ಸಿನಿಂದ ಅನುಭವಿಸುವದು ಒಳ್ಳೇದು. ಪ್ರಾರ್ಥನೆಯಿಂದ ಅವರು ಉಣ್ಣುವ ಪದಾರ್ಥಗಳು ಪರಿಶುದ್ಧವಾಗುವವು.

3. ಸುಳ್ಳು ಬೋಧನೆಗಳನ್ನು ತಳ್ಳಿ ಬಿಟ್ಟು, ಸತ್ಯವನ್ನು ಕೈಕೊಂಡು ಸಹೋದರರಿಗೆ ಬೋಧಿಸುವದರಿಂದ ತಿಮೊಥೆಯನು ದೇವರ ಉತ್ತಮ ದಾಸನೆಂದು ತೋರಲೂ, ಸುಬೋಧನೆಯಲ್ಲಿ ಪ್ರವೀಣನಾಗಲೂ ಹೇತುವೆಯಾಗುವದು.

4. ಅಜ್ಜಿಕಥೆಗಳು ಎಂಬುವದು ಬುದ್ಧಿಹೀನವಾದ ಕಟ್ಟುಕಥೆಗಳನ್ನು ಕುರಿತದ್ದು. ತಲ್ಮೂದ್ ಎಂಬ ಯೆಹೂದ್ಯರ ಗ್ರಂಥಗಳಲ್ಲಿ ಇಂಥಾ ಕಟ್ಟುಕಥೆಗಳು ಬಹಳ ಉಂಟು. (೧. ೪. ವಚನದ ವ್ಯಾಖ್ಯಾನ ನೋಡ ಬೇಕು.) ಕಟ್ಟುಕಥೆಗಳನ್ನು ನಂಬುವವರು ಭಕ್ತಿಯಲ್ಲಿ ಬೆಳೆಯಲಾರರು.

5. ಶರೀರದ ಅಭ್ಯಾಸ ಅಂದರೆ, ಕಠಿಣ ತಪಸ್ಸನ್ನು ಅಥವಾ ಹಟಸಾಧಕವನ್ನು ಕುರಿತದ್ದು. ಇದರ ಪ್ರಯೋಜನ ಸ್ವಲ್ಪ ಕಾಲ ಮಾತ್ರವಿರುವದು. ಭಕ್ತಿಯ ಅಭ್ಯಾಸವೆಂಬ ಪರಿಶುದ್ಧ ಸಾಧನೆಯಿಂದ ಉಂಟಾಗುವ ಪ್ರಯೋಜನವು ಇಹದಲ್ಲಿ ಭಾಗ್ಯವನ್ನೂ ಪರದಲ್ಲಿ ನಿತ್ಯಾನಂದವನ್ನೂ ಕೊಡ ತಕ್ಕದ್ದಾಗಿರುವದರಿಂದ ಎಲ್ಲಕ್ಕೂ ಪ್ರಯೋಜನವಾದದ್ದಾಗಿದೆ. ಇಹ ಪರ ಜೀವಗಳ ವಾಗ್ದತ್ತವುಳ್ಳ ದೇವಭಕ್ತಿಯನ್ನು ಜಾಗ್ರತೆಯಿಂದ ಅಭ್ಯಾಸಿಸುವವರು ಭಾಗ್ಯವಂತರು.

6. ಈ ವಾಕ್ಯವೆಂಬುವದು, ಹಿಂದಿನ ವಾಕ್ಯದಲ್ಲಿರುವ ರಕ್ಷಣೆಗೆ ತಕ್ಕ ಮುಖ್ಯ ಸತ್ಯವನ್ನು ತೋರಿಸುತ್ತದೆ.

7. ನಂಬಿಕೆಯೂ ಎಲ್ಲಾ ಅಂಗೀಕಾರಕ್ಕೆ ಯೋಗ್ಯವೂ ಆದ ಈ ಸತ್ಯವನ್ನು ಅಪೊಸ್ತಲರು ದೃಢವಾಗಿ ನಂಬಿದ್ದರಿಂದ, ಅವರು ಬಹಳ ಕಷ್ಟ ಪಡಲೂ ಅದರಿಂದ ಬರುವ ನಿಂದೆ ಉಪದ್ರಗಳನ್ನು ಸಹಿಸಲೂ ಬಲವುಳ್ಳವರಾದರು. ಮನುಷ್ಯರೆಲ್ಲರನ್ನು ರಕ್ಷಿಸ ಚಿತ್ತವುಳ್ಳವನೂ, ವಿಶ್ವಾಸಿಸುವವರನ್ನು ಅಗತ್ಯವಾಗಿ ರಕ್ಷಿಸುವವನೂ ಆದ ದೇವರನ್ನು ನಂಬಿದವರು ಕಷ್ಟವನ್ನೂ ಉಪದ್ರವನ್ನೂ ನಿಂದೆಯನ್ನೂ ಸಹಿಸುವರು.

8. ತಿಮೊಥೆಯನಿಗೆ ಆ ಕಾಲದಲ್ಲಿ ಹೆಚ್ಚು ಕಡಿಮೆ ಮೂವತ್ತೈದು ವರುಷ ಪ್ರಾಯವಿರ ಬಹುದು. ಮುದುಕನಾದ ಪೌಲನ ವಯಸ್ಸಿಗೆ ಇವನು ಯೌವನಸ್ಥನೆಂಧೇಳ ಬಹುದು. ಅವನ ಯೌವನದ ನಿಮಿತ್ತ ಒಬ್ಬರೂ ಅವನನ್ನು ಅಲಕ್ಷ್ಯ ಮಾಡದ ಹಾಗೆ, ತ್ರಿಕರಣಶುದ್ಧಿಯುಳ್ಳವನಾಗಿ, ವಿಶ್ವಾಸಿಗಳಿಗೆ ಮಾದರಿಯಾಗಿರ ಬೇಕಾಗಿತ್ತು.

9. ಇದು ಮುಖ್ಯವಾಗಿ ವೇದಬರಹಗಳ ಓದುವಿಕೆಯನ್ನು ಕುರಿತದ್ದು. (ಅಪೊ. ಕ್ರಿ. ೧೩. ೧೫.) ತಾನು ಬರುವ ಪರ್ಯಂತರ ಸಭೆಯಲ್ಲಿ ವೇದಬರಹಗಳನ್ನು ಓದಿ, ಅದರ ಸತ್ಯಗಳನ್ನು ಬೋಧಿಸಿ, ಬುದ್ಧಿ ಹೇಳುವ ಹಾಗೆ ಪೌಲನು ತಿಮೊಥೆಯನಿಗೆ ಆಜ್ಞಾಪಿಸುತ್ತಾನೆ.

10. ಇದು ಪರಿಶುದ್ಧಾತ್ಮನ ವಿಶೇಷ ವರವು. (೧ ಕೊರಿ. ೧೨. ೪—೧೧.) ಲುಸ್ತ್ರ ಪಟ್ಣದ ಹಿರಿಯರ ಸಭೆಯು ತಿಮೊಥೆಯನ ಮೇಲೆ ಕೈಗಳನ್ನಿಟ್ಟು, ಅವನು ಸಭೆಯಲ್ಲಿ ಉತ್ತಮನಾಗಿರುವನೆಂದು ಪ್ರವಾದನೆಯಾಗಿ ಹೇಳಿ, ಅವನನ್ನು ದೇವರ ಸೇವೆಗೆ ಏರ್ಪಡಿಸಿದಾಗ ಈ ವಿಶೇಷ ವರವನ್ನು ಹೊಂದಿರುವನು. (೧. ೧೮. ೨ ತಿಮೊ. ೧. ೬.)

11. ಬೋಧಕರು ಸಕಲ ವಿಷಯಗಳಲ್ಲಿಯೂ ವೃದ್ಧಿ ಹೊಂದುವದು ಎಲ್ಲರಿಗೂ ತೋರುವ ಹಾಗೆ ತಾವು ದೇವರ ಸೇವೆ ಹೊಂದಿದ ಕಾಲದಲ್ಲಿ ಮಾಡಿ ಕೊಂಡ ನಿರ್ಣಯಗಳನ್ನು ಯಾವಾಗಲೂ ನೆನಸಿ ಅವುಗಳಲ್ಲಿ ದೃಢವಾಗಿ ನೆಲೆಯಾಗಿರ ಬೇಕು. ಅವರು ವೃದ್ಧಿ ಹೊಂದಿದರೆ, ಅವರ ಸಭೆಯವರು ಸಹ ವೃದ್ಧಿ ಹೊಂದುವರು.

೧೬ ಹಾಗೆ, ಇವುಗಳನ್ನು ಚಿಂತಿಸು, ಇವುಗಳಲ್ಲಿ ಇರು. ನಿನಗೂ [1]ಬೋಧನೆಗೂ ನೋಡಿಕೋ; ಇವುಗಳಲ್ಲಿ
ನೆಲೆಯಾಗಿರು. ಯಾಕಂದರೆ ಇದನ್ನು ಮಾಡಿ, ನಿನ್ನನ್ನೂ, ನಿನ್ನನ್ನು ಕೇಳುವವರನ್ನೂ, ರಕ್ಷಿಸುವಿ.

ಸಭೆಯಲ್ಲಿರುವ ವಿಧವೆಗಳು ಮುಂತಾದ ನಾನಾ ಅಂತಸ್ತಿನವರನ್ನು ನಡಿಸ ತಕ್ಕ ಕಟ್ಟಳೆಗಳು.

**5.** [2]ಹಿರಿಯನನ್ನು ಗದರಿಸಡೆ, ಅವನಿಗೆ ತಂದೆಗೆಂದು ಬುದ್ಧಿ ಹೇಳು; ಕಿರಿಯರಿಗೆ ಸಹೋದರರಿಗೆಂದು;
೨ ಹಿರೇ ಹೆಂಗಸರಿಗೆ ತಾಯಿಗಳಿಗೆಂದು, ಕಿರೇ ಹೆಂಗಸರಿಗೆ ಸಹೋದರಿಗಳಿಗೆಂದು, [3]ಎಲ್ಲಾ ನಿರ್ಮಲತ್ವದಲ್ಲಿಯೇ.
೩, ೪ [4]ನಿಜ ವಿಧವೆಗಳಾದ ವಿಧವೆಗಳನ್ನು ಸನ್ಮಾನಿಸು. ಆದರೆ ಒಬ್ಬ ವಿಧವೆಗೆ ಮಕ್ಕಳಾಗಲಿ ಮೊಮ್ಮಕ್ಕಳಾಗಲಿ
ಇದ್ದರೆ, ಅವರು ಮೊದಲು ಸ್ವಂತ ಮನೆಯಲ್ಲಿ [5]ಭಕ್ತರಾಗಿರಲೂ, ಹೆತ್ತವರಿಗೆ ಪ್ರತ್ಯುಪಕಾರ ಮಾಡಲೂ,
ಕಲಿತು ಕೊಳ್ಳಲಿ. ಯಾಕಂದರೆ ದೇವರ ಮುಂದೆ ಇದೇ ಒಳ್ಳೇದಾಗಿಯೂ ಸಮರ್ಪಕವಾಗಿಯೂ ಅದೆ.
೫ ಆದರೆ [6]ಒಂಟಿಗಳಾಗಿರುವ ನಿಜ ವಿಧವೆಯು ದೇವರಲ್ಲಿ ನಿರೀಕ್ಷಿಸಿ, ರಾತ್ರಿ ಹಗಲು ಪ್ರಾರ್ಥನೆಗಳಲ್ಲಿಯೂ
೬ ಬಿನ್ನಹಗಳಲ್ಲಿಯೂ ನೆಲೆಯಾಗಿರುವಳು. ಆದರೆ ಭೋಗಸ್ಥಳು ಬದುಕುವಾಗ್ಯೆ, [7]ಸತ್ತವಳಾಗಿದ್ದಾಳೆ.
೭, ೮ ಅವರು ಅಪರಾಧವಿಲ್ಲದೆ ಇರುವ ಹಾಗೆ, ಇವುಗಳನ್ನು ಆಜ್ಞಾಪಿಸು. ಆದರೆ ಒಬ್ಬನು ಸ್ವಂತ ಜನರಿಗೋ
ಸ್ಕರವೂ, ಮುಖ್ಯವಾಗಿ ಮನೆಯವರಿಗೋಸ್ಕರವೂ, ಮುಂಚಿಂತಿಸದಿದ್ದರೆ, [8]ವಿಶ್ವಾಸವನ್ನು ಬೊಂಕಿ, [9]ಅವಿ
ಶ್ವಾಸಿಗಿಂತ ಕಡೆಯಾಗಿದ್ದಾನೆ.
೯, ೧೦ ಅರವತ್ತು ವರುಷಕ್ಕೆ ಕಡಿಮೆಯಾಗಿರದವಳೂ, ಒಬ್ಬ ಗಂಡನ ಹೆಂಡತಿಯಾಗಿದ್ದವಳೂ, ಸತ್ಕ್ರಿಯೆ
ಗಳಿಂದ ಹೆಸರುಗೊಂಡವಳೂ, ಮಕ್ಕಳನ್ನು ಸಾಕಿ, ಆತಿಥ್ಯ ಮಾಡಿ, ಪರಿಶುದ್ಧರ ಕಾಲುಗಳನ್ನು ತೊಳೆದು,
ಉಪದ್ರ ಪಡುವವರಿಗೆ ಸಹಾಯಕಳಾಗಿ, ಎಲ್ಲಾ ಸತ್ಕ್ರಿಯೆಗಳನ್ನು ಅನುಸರಿಸಿದವಳೂ ಆಗಿದ್ದರೆ, ವಿಧವೆಗಳ

1. ಬೋಧನೆ ಎಂಬುವದು ಬೋಧಿಸುವದನ್ನು ಕುರಿತದ್ದು. (೧೩. ವ.) ಉತ್ತಮ ಬೋಧಕರು ರಕ್ಷಣೆಯ ವಿಷಯ ತಮ್ಮ ಸ್ವಂತ ಕಾರ್ಯವನ್ನು ಕ್ರಮ ಪಡಿಸಿ ಕೊಂಡು ಮತ್ತೊಬ್ಬರ ವಿಷಯ ಚಿಂತಿಸುವರು. ಮತ್ತು ಅವರು ರಕ್ಷಿಸಲ್ಪಡುವ ಹಾಗೆ ಜಾಗ್ರತೆಯಾಗಿರುವರು. (ರೋಮಾ. ೧೦. ೧೩—೧೫.) ಮತ್ತೊಬ್ಬರ ರಕ್ಷಣೆಯನ್ನು ಚಿಂತಿಸುವವರೆಂದು ತೋರಿಸುವ ಅನೇಕರು ತಮ್ಮ ವಿಷಯ ನಿಶ್ಚಿಂತರಾಗಿರ ಬಹುದು. (ದ್ವಿತೀಯ ನ್ಯಾ. ೪. ೧೦.) ಉತ್ತಮ ಬೋಧಕರು ತಮ್ಮನ್ನೂ ತಮ್ಮ ಬೋಧನೆ ಕೇಳುವವರನ್ನೂ ರಕ್ಷಿಸಿ ಕೊಳ್ಳುವ ಹಾಗೆ ಪ್ರಯಾಸ ಪಡುವರು.

2. ಪ್ರಾಯದಲ್ಲಿ ಹಿರಿಯರಾದವರು ಅಪರಾಧ ಮಾಡಿದರೆ, ಅವರನ್ನು ಅಧಿಕಾರದಿಂದ ಗದರಿಸದೆ, ಮಗನು ತಂದೆಯ ಬಳಿಯಲ್ಲಿ ಮಾತಾಡುವ ಪ್ರಕಾರ ಶಾಂತವಾಗಿ ಬುದ್ಧಿ ಹೇಳ ಬೇಕು.

3. ಮುದಿ ಪ್ರಾಯವುಳ್ಳ ಪುರುಷರನ್ನು ತಂದೆಗಳ ಹಾಗೆಯೂ, ಸ್ತ್ರೀಯರನ್ನು ತಾಯಿಗಳ ಹಾಗೆಯೂ, ಯೌವನ ಪುರುಷರನ್ನು ಸಹೋದರರ ಹಾಗೆಯೂ, ಯೌವನ ಸ್ತ್ರೀಯರನ್ನು ಸಹೋದರಿಗಳ ಹಾಗೆಯೂ ಭಾವಿಸಿ, ನಿರ್ಮಲ ಮನಸ್ಸಿನಿಂದಲೂ ಪಕ್ಷದಿಂದಲೂ ಬುದ್ಧಿ ಹೇಳ ಬೇಕಾದದ್ದು ಉತ್ತಮ ಬೋಧಕರ ಲಕ್ಷಣವು. ಒಂದು ಕುಟುಂಬದಲ್ಲಿ ನಡಿಯುವ ಪ್ರಕಾರ ದೇವರ ಕುಟುಂಬವಾದ ಸಭೆಯಲ್ಲಿಯೂ ನಡಿಯ ಬೇಕು. ನಿರ್ಮಲವಾದ ಹೃದಯದಿಂದ ನಡಿಯದ ಬೋಧಕನು ಉತ್ತಮನಾಗಿ ಎಣಿಸಲ್ಪಡುವದಿಲ್ಲ.

4. ಗಂಡನು ಸತ್ತು ಬೇರೆ ಆಧಾರವಿಲ್ಲದೆ ಶ್ರಮೆ ಪಡುವ ಭಕ್ತಿಯುಳ್ಳ ವಿಧವೆಗಳೇ ನಿಜ ವಿಧವೆಗಳು. ಇಂಥವರನ್ನು ಘನ ಪಡಿಸಿ, ಅವರನ್ನು ಸಂರಕ್ಷಿಸುವದು ಸಭೆಯವರ ಹಂಗಾಗಿದೆ. (೧೦, ೧೬. ವ.) ಆದರೆ ಅವರಿಗೆ ಮಕ್ಕಳಾಗಲಿ ಮೊಮ್ಮಕ್ಕಳಾಗಲಿ ಇದ್ದರೆ, ಅವರೇ ತಮ್ಮವರಿಗೆ ಸಹಾಯ ಮಾಡ ಬೇಕು.

5. ಸ್ವಂತ ಕುಟುಂಬವನ್ನು ಭಕ್ತಿಯಲ್ಲಿ ನಡಿಸಿ ಪರಾಮರಿಸುತ್ತಾ ಬರುವವರು ತಮ್ಮ ಬಂಧುಗಳಾದ ಮುದಿ ಪ್ರಾಯದವರಿಗೆ ಅನ್ನವಸ್ತ್ರಗಳನ್ನು ಕೊಟ್ಟು ಸಹಾಯ ಮಾಡುವರು. ಇಂಥವರ ಕ್ರಿಯೆಗಳು ದೇವರಿಗೆ ಮೆಚ್ಚಿಕೆಯಾಗಿರುವವು.

6. ಆಧಾರವೇನೂ ಇಲ್ಲದೆ ಒಂಟಿಯಾಗಿದ್ದು ಕರ್ತನನ್ನೇ ಆಶ್ರಯಿಸಿ ಕೊಂಡು ರಾತ್ರಿ ಹಗಲು ಆತನನ್ನು ಆರಾಧಿಸುತ್ತಾ ಇರುವವರು ನಿಜವಾದ ವಿಧವೆಗಳಾಗಿದ್ದಾರೆ. (ಲೂಕ. ೨. ೩೬, ೩೭.)

7. ತನಗುಂಟಾದ ದ್ರವ್ಯವನ್ನು ಸುಖಭೋಗಗಳಲ್ಲಿ ವ್ರಯ ಮಾಡಿ ಕಾಮವಿಕಾರಕ್ಕೆ ಸ್ಥಳ ಕೊಟ್ಟು ನಡಿಯುವ ವಿಧವೆಯು ಸತ್ತ ಹೆಣದ ಹಾಗೆ ಆತ್ಮಭಾವದಲ್ಲಿ ಸತ್ತವಳಾಗಿದ್ದಾಳೆ.

8. ವಿಶ್ವಾಸವು ಪ್ರೀತಿಯಿಂದ ತೋರ ಬರುವ ಕಾರಣ ಪ್ರೀತಿ ಇಲ್ಲದವನು ವಿಶ್ವಾಸವನ್ನು ಬೊಂಕುವವನಾಗಿದ್ದಾನೆ. (ಯಾಕೋಬ. ೨. ೧೪—೧೭. ೧ ಯೋಹಾ. ೩. ೧೭, ೧೮; ೪. ೨೦.)

9. ಅವಿಶ್ವಾಸಿಗಳಾದ ಅಜ್ಞಾನರು ಸಹ ತಮ್ಮ ತಂದೆ ತಾಯಿ ಮುಂತಾದ ಬಾಂಧವರನ್ನು ಪರಾಮರಿಸುವದು ತಮ್ಮ ಹಂಗೆಂದೂ ಅದು ಉತ್ತಮ ಧರ್ಮವೆಂದೂ ಹೇಳುವರು. ಆದದರಿಂದ ಹೆತ್ತವರು ಮುಂತಾದ ತನ್ನ ನೆರೆಯವರಿಗೆ ಸರಿಯಾಗಿ ಪರಾಮರಿಕೆ ಮಾಡದ ಕ್ರೈಸ್ತನು ಅವಿಶ್ವಾಸಿಗಿಂತ ಕೆಟ್ಟವನಾಗಿರುತ್ತಾನೆ. ನೀವು ಮತ್ತೊಬ್ಬರಿಗಿಂತ ಹೆಚ್ಚಾದದ್ದೇನು ಮಾಡುತ್ತೀರಿ? ಎಂದು ನಮ್ಮ ಕರ್ತನು ಹೇಳಿರುವ ವಾಕ್ಯವನ್ನು ಕ್ರೈಸ್ತರೆಲ್ಲರೂ ಜ್ಞಾಪಕ ಮಾಡಿ ಕೊಂಡು ನಡಿಯುವದು ಅವರ ಹಂಗಾಗಿದೆ.



೧೧ ಲೆಖ್ಖದಲ್ಲಿ [1]ಶೇರಿಸಲ್ಪಡಲಿ. ಆದರೆ ಕಡಿಮೆ ಪ್ರಾಯದ ವಿಧವೆಗಳನ್ನು [2]ಬೇಡೆಂದು ಬಿಡು; ಯಾಕಂದರೆ
೧೨ ಅವರು ಕ್ರಿಸ್ತನಿಗೆ ವಿರೋಧವಾಗಿ ತುಂಟರಾದಾಗ, ಮದುವೆ ಮಾಡಿ ಕೊಳ್ಳ ಇಚ್ಛೈಸುತ್ತಾರೆ. ಮೊದಲಿನ
೧೩ ವಿಶ್ವಾಸವನ್ನು ಬಿಟ್ಟದರಿಂದ ಆಜ್ಞೆನಿರ್ಣಯ ಅವರಿಗೆ ಉಂಟು. ಅದಲ್ಲದೆ ಅವರು ಮೈಗಳ್ಳರಾಗಿ, ಮನೆ ಮನೆ
ತಿರುಗ ಕಲಿತು ಕೊಳ್ಳುತ್ತಾರೆ; ಮೈಗಳ್ಳರಾಗಿರುವದಲ್ಲದೆ, ಹರಟೆಯುವರಾಗಿಯೂ, ತೊಂದರೆಗಾರರಾಗಿಯೂ,
೧೪ ಬಾರದವುಗಳನ್ನು ಮಾತಾಡುವವರಾಗಿಯೂ ಇದ್ದಾರೆ. ಆದದರಿಂದ ಯೌವನ ಸ್ತ್ರೀಯರು [3]ಮದುವೆ
ಮಾಡಿ ಕೊಂಡು, ಮಕ್ಕಳನ್ನು ಹೆತ್ತು, ಮನೇ ಕೆಲಸ ನಡಿಸಿ, ನಿಂದಿಸುವದಕ್ಕೆ ಯಾವ ಆಸ್ಪದವನ್ನಾದರೂ
೧೫ [4]ಎದುರಾಳಿಗೆ ಕೊಡದೆ ಇರ ಇಚ್ಛೈಸುತ್ತೇನೆ. ಯಾಕಂದರೆ ಈಗಲೇ ಕೆಲವರು ಸೈತಾನನ ಹಿಂದೆ ಮೋಸ
೧೬ ಹೋಗಿದ್ದಾರೆ. ಒಬ್ಬ ವಿಶ್ವಾಸಿಸುವವನಿಗಾದರೂ ವಿಶ್ವಾಸಿಸುವವಳಿಗಾದರೂ [5]ವಿಧವೆಯರಿದ್ದರೆ, ಸಭೆಯು
ಭಾರ ಪಡದೆ, ನಿಜ ವಿಧವೆಯರನ್ನು ಸಂರಕ್ಷಿಸುವ ಹಾಗೆ, ಅವರು ಅವರನ್ನು ಸಂರಕ್ಷಿಸಲಿ.

ಹಿರಿಯರನ್ನೂ ಕ್ರೈಸ್ತರಾದ ದಾಸರನ್ನೂ ಕುರಿತ ಕಟ್ಟಳೆಗಳು.

೧೭ ಚನ್ನಾಗಿ ಅಧಿಕಾರ ನಡಿಸುವ ಹಿರಿಯರು, ಮುಖ್ಯವಾಗಿ ವಾಕ್ಯದಲ್ಲಿಯೂ [6]ಬೋಧನೆಯಲ್ಲಿಯೂ ಕಷ್ಟ
೧೮ ಮಾಡುವವರು, ಎರಡಷ್ಟು ಮಾನಕ್ಕೆ ತಕ್ಕವರೆಂದೆಣಿಸಲ್ಪಡಲಿ. ಯಾಕಂದರೆ, ಕಣ ತುಳಿಯುವ ಎತ್ತಿನ
ಬಾಯಿ ಕಟ್ಟ ಬಾರದೆಂದೂ, (ದ್ವಿತೀಯ ನ್ಯಾ. ೨೫. ೪.) [7]ಕೆಲಸದವನು ತನ್ನ ಕೂಲಿಗೆ ಯೋಗ್ಯನೆಂದೂ,
(ಮತ್ತಾ. ೧೦. ೧೦. ಲೂಕ. ೧೦. ೭.) ಬರಹವು ಹೇಳುತ್ತದೆ.
೧೯ ಹಿರಿಯನಿಗೆ ವಿರೋಧವಾಗಿ, [8]ಎರಡು ಮೂರು ಸಾಕ್ಷಿಗಳಿದ್ದರೆ ಹೊರ್ತು, ದೂರನ್ನು ಅಂಗೀಕರಿಸ ಬೇಡ.
೨೦, ೨೧ ಮಿಕ್ಕಾದವರು ಸಹ ಹೆದರುವ ಹಾಗೆ, ಪಾಪ ಮಾಡುವವರನ್ನು [9]ಎಲ್ಲರ ಮುಂದೆ ಗದರಿಸು. [10]ದಾಕ್ಷಿ

1. ಸಭೆಯ ಧರ್ಮಹಣದಿಂದ ಆದರಿಸಲ್ಪಟ್ಟು ಕೆಲವು ಸಭೆಯ ಕಾರ್ಯಗಳನ್ನು ನಡಿಸುತ್ತಾ ಬಂದ ಒಂದು ವರ್ಗದ ವಿಧವೆಗಳು ಆ ಕಾಲದಲ್ಲಿದ್ದರೆಂದು ತೋರುತ್ತದೆ. ಅಂಥವರ ಗುಣಾತಿಶಯಗಳನ್ನು ಕುರಿತು ಈ ವಚನದಲ್ಲಿ ವಿವರವಾಗಿ ಹೇಳಿ ಇದೆ. ಅವರು ಅರವತ್ತು ವರುಷಕ್ಕೆ ಕಡಿಮೆಯಾಗದವರೂ ಒಬ್ಬನೇ ಗಂಡನ ಹೆಂಡತಿಯಾಗಿದ್ದವರೂ ಆಗಿರ ಬೇಕು. (೩. ೨. ವಚನದ ವ್ಯಾಖ್ಯಾನ ನೋಡ ಬೇಕು.) ಮತ್ತು ತಮ್ಮ ಕುಟುಂಬದವರಿಗೂ ನೆರೆಯವರಿಗೂ ಮಾಡ ತಕ್ಕ ಹಂಗುಗಳನ್ನು ಸರಿಯಾಗಿ ಈಡೇರಿಸಿ ಎಲ್ಲರಿಂದಲೂ ಒಳ್ಳೇ ಸಾಕ್ಷಿ ಹೊಂದಿದವರಾಗಿರ ಬೇಕು. ಅಂಥಾ ಮುದಿ ಪ್ರಾಯದ ವಿಧವೆಗಳನ್ನು ಸಭೆಯಲ್ಲಿ ಶೇರಿಸಿ, ಅವರಿಗೆ ಘನವನ್ನೂ ಸಹಾಯವನ್ನೂ ಕೊಡ ಬೇಕು.

2. ನಿಜ ವಿಧವೆಗಳ ಲೆಖ್ಖದಲ್ಲಿ ಯೌವನ ವಿಧವೆಗಳನ್ನು ಶೇರಿಸ ಬಾರದು. ಅವರು ಯೌವನ ಪ್ರಾಯದವರಾಗಿರುವದರಿಂದ ಮದುವೆ ಮಾಡಿ ಕೊಳ್ಳದೆ ವಿರಕ್ತರಾಗಿದ್ದು ಕರ್ತನಿಗೆ ಸೇವೆ ಮಾಡ ಬೇಕೆಂದು ಅವರು ಮೊದಲಲ್ಲಿ ಮಾಡಿ ಕೊಂಡಿದ್ದ ನಿರ್ಣಯವನ್ನು ಬಿಟ್ಟು, ಪುನರ್ವಿವಾಹ ಮಾಡಿ ಕೊಳ್ಳ ಅಪೇಕ್ಷಿಸುವರು. ಅವರ ನಿರ್ಣಯವನ್ನು ಹೀಗೆ ಬದಲು ಮಾಡುವದರಿಂದ ತಮ್ಮ ಮನಸ್ಸಾಕ್ಷಿಯಿಂದಲೂ ಪರರಿಂದಲೂ ಅಪರಾಧಸ್ಥರೆಂದು ತೀರಿಸಲ್ಪಡುವರು. ಇಂಥವರು ಸೋಮಾರಿಗಳಾಗಿಯೂ ಹರಟುವವರಾಗಿಯೂ ಇದ್ದು ಕಾಲವನ್ನು ವ್ಯರ್ಥವಾಗಿ ಕಳಿಯುವರು.

3. ಯೌವನಸ್ಥರಾದ ವಿಧವೆಗಳು ಮದುವೆ ಇಲ್ಲದೆ ಇದ್ದು ವ್ಯರ್ಥ ಕಾಲಕ್ಷೇಪ ಮಾಡಿ ದೇವರ ನಾಮಕ್ಕೆ ದೂಷಣೆ ಬರ ಮಾಡುವದಕ್ಕಿಂತ, ಅವರು ಮದುವೆ ಮಾಡಿ ಕೊಂಡು ಮನೆಯ ಕೆಲಸವನ್ನು ಕ್ರಮವಾಗಿ ನಡಿಸಿ, ಮಕ್ಕಳನ್ನು ಸನ್ಮಾರ್ಗದಲ್ಲಿ ಬೆಳಿಸಿ, ದೇವರಿಗೆ ಸೇವೆ ಮಾಡುವದು ಅಧಿಕ ಉತ್ತಮವು.

4. ದೊಡ್ಡ ವಿರೋಧಿಯಾಗಿರುವ ಸೈತಾನನ ಮಕ್ಕಳು, ಕ್ರೈಸ್ತರು ಜಾರಿ ಬೀಳುವದನ್ನು ಕಂಡು ಅವರನ್ನು ನಿಂದಿಸುವದಕ್ಕೆ ಯಾವಾಗಲೂ ಕಾದು ಕೊಂಡಿದ್ದಾರೆ. ಇಂಥಾ ನಿಂದೆಗೆ ಸ್ಥಳವಿಲ್ಲದ ಹಾಗೆ ಅವರು ಜಾಗ್ರತೆಯಾಗಿ ನಡಿಯ ಬೇಕು.

5. ಇದು ಬಂಧುಗಳಾದ ವಿಧವೆಯರನ್ನು ಕುರಿತದ್ದು. (೩. ವ.) ವಿಧವೆಗಳನ್ನು ಸಂರಕ್ಷಣೆ ಮಾಡ ತಕ್ಕ ಬಾಧ್ಯಸ್ಥರು ಇರುವಾಗ, ಅವರು ಸಭೆಯಿಂದ ಸಂರಕ್ಷಣೆ ಹೊಂದುವ ಹಾಗೆ ಬಿಡುವದು ಧರ್ಮವಲ್ಲ.

6. ಸಭೆಯನ್ನು ಆಳುವವರೂ ಬೋಧಿಸುವವರೂ ಆದ ಹಿರಿಯರು ಎರಡಷ್ಟು ಮಾನಕ್ಕೆ ತಕ್ಕವರಾಗಿದ್ದಾರೆ. ಅವರಿಗೆ ಮಾನ ಸಲ್ಲಿಸ ಬೇಕಾದದ್ದಲ್ಲದೆ, ಅವರಿಗೆ ತಕ್ಕ ಸಂರಕ್ಷಣೆಯನ್ನು ಸಹ ಮಾಡ ಬೇಕು ಎಂದು ವೇದದಲ್ಲಿಯೂ (ದ್ವಿತೀಯ ನ್ಯಾ. ೨೫. ೪.) ಸ್ವಭಾವಬುದ್ಧಿಗೂ ಸ್ಪಷ್ಟವಾಗಿ ತೋರುತ್ತದೆ.

7. ಇದು ಒಂದು ಗಾದೆಯಾಗಿರುವದು. ಕರ್ತನು ತನ್ನ ಶಿಷ್ಯರನ್ನು ಸುವಾರ್ತೆ ಪ್ರಸಂಗಿಸುವದಕ್ಕೆ ಕಳುಹಿಸಿದಾಗ ಆತನ ಬಾಯಿಂದ ಹೇಳಿದ ವಚನಗಳಲ್ಲಿ ಇದು ಒಂದು ವಾಕ್ಯವಾಗಿದೆ. (ಮತ್ತಾ. ೧೦. ೧೦. ಲೂಕ. ೧೦. ೭.)

8. ಸಭೆಯ ಹಿರಿಯನು ಮೇಲಿನ ಅಂತಸ್ತುಳ್ಳವನಾಗಿರುವದರಿಂದ ಅವನಿಗೆ ವಿರೋಧವಾಗಿ ಹೇಳಲ್ಪಡುವ ದೂರನ್ನು ಎರಡು ಮೂರು ತಕ್ಕ ಸಾಕ್ಷಿಗಳಿಲ್ಲದೆ ಅಂಗೀಕರಿಸ ಬಾರದು.

9. ತಕ್ಕ ರುಜುವಿನಿಂದ ಅಪರಾಧಸ್ಥರೆಂದು ನಿಶ್ಚಯಿಸಲ್ಪಟ್ಟವರನ್ನು ಮತ್ತೊಬ್ಬರಿಗೆ ಎಚ್ಚರಿಕೆಯಾಗುವ ಹಾಗೆ ಸಭೆಯಲ್ಲಿ ಬಹಿರಂಗವಾಗಿ ಗದರಿಸ ಬೇಕು.

10. ಅಪರಾಧವನ್ನು ವಿಚಾರಿಸುವದಕ್ಕಿಂತ ಮುಂಚೆ ಪಕ್ಷ ಪರಪಕ್ಷವಾಗಿ ಏನೂ ತೀರಿಸ ಬಾರದು. ಹಾಗೆ ಮಾಡಿದರೆ, ಪಕ್ಷಪಾತ ಮಾಡಿ ಅನ್ಯಾಯವಾದ ತೀರ್ಪು ಮಾಡ ಬೇಕಾಗಿರುವದು.

ಣ್ಯದಿಂದ ಏನೂ ಮಾಡದೆ, ಪಕ್ಷ ಪರಪಕ್ಷವಿಲ್ಲದೆ, ಇವುಗಳನ್ನು ಕೈಕೊಳ್ಳ ಬೇಕೆಂದು, ದೇವರೂ, ಕರ್ತನಾ
೨೨ ದ ಯೇಸು ಕ್ರಿಸ್ತನೂ, [1]ಆಯಲ್ಪಟ್ಟ ದೂತರೂ, ಇವರ ಮುಂದೆ ನಿನಗೆ ಸಾಕ್ಷಿ ಕೊಡುತ್ತೇನೆ. ಯಾವನ
ಮೇಲಾದರೂ ತ್ವರೆಯಾಗಿ [2]ಕೈಗಳನ್ನು ಇಡದೆ, ಬೇರೊಬ್ಬರ ಪಾಪಗಳಲ್ಲಿ ಪಾಲುಗಾರನಾಗದೆ ಇರು;
ನಿನ್ನನ್ನು ನಿರ್ಮಲನಾಗಿ ಕಾಪಾಡಿಕೋ.
೨೩ ಇನ್ನು ಮೇಲೆ ನೀರು ಕುಡಿಯದೆ, ನಿನ್ನ ಹೊಟ್ಟೆಗೋಸ್ಕರವೂ ಅನೇಕ ಸಾರಿ ನಿನಗೆ ಆಗುವ ಬಲಹೀನತ್ವಗ
ಳಿಗೋಸ್ಕರವೂ, [3]ಸ್ವಲ್ಪ ದ್ರಾಕ್ಷೇ ರಸವನ್ನು ತೆಗೆದುಕೋ.
೨೪ ಕೆಲವು ಮನುಷ್ಯರ ಪಾಪಗಳು ಮುಂಚೆ ಪ್ರತ್ಯಕ್ಷವಾಗಿ, ಆಜ್ಞೆನಿರ್ಣಯಕ್ಕೆ [4]ಮುಂಚೆ ಬರುತ್ತವೆ; ಕೆಲವ
೨೫ ರನ್ನು ಅವು ಹಿಂಬಾಲಿಸುತ್ತವೆ. ಆದೇ ಪ್ರಕಾರ ಒಳ್ಳೇ ಕ್ರಿಯೆಗಳು ಸಹ ಮುಂಚೆ ಪ್ರತ್ಯಕ್ಷವಾಗಿವೆ; ಬೇರೆ
ಯಾಗಿರುವವುಗಳು ಮರೆಯಾಗಿರಲಾರವು.

6. [5]ನೊಗದ ಕೆಳಗಿರುವ ದಾಸರಷ್ಟು, ದೇವರ ಹೆಸರೂ ಉಪದೇಶವೂ ದೂಷಣೆ ಪಡದ ಹಾಗೆ, ಸ್ವಂತ
೨ ಯಜಮಾನರನ್ನು ಸಕಲ ಮಾನಕ್ಕೆ ತಕ್ಕವರೆಂದೆಣಿಸಲಿ. ಆದರೆ ವಿಶ್ವಾಸಿಗಳಾದ ಯಜಮಾನರುಳ್ಳವರು,
ಅವರನ್ನು ಸಹೋದರರೆಂದು ಉದಾಸೀನ ಮಾಡದೆ, ಅವರು ವಿಶ್ವಾಸಿಗಳೂ, ಪ್ರಿಯರೂ, [6]ಉಪಕಾರದಲ್ಲಿ
ಪಾಲು ಹೊಂದುವವರೂ ಆಗಿರುವದರಿಂದ, ಹೆಚ್ಚಾಗಿ ಸೇವೆ ಮಾಡಲಿ. ಇವುಗಳನ್ನು ಬೋಧಿಸಿ ಆ
ಜ್ಞಾಪಿಸು.

ಹುಡುವಾದ ಬುದ್ಧಿಮಾತುಗಳು; ಅಂತ್ಯೋಕ್ತಿಯು.

೩ ಒಬ್ಬನು, ನಮ್ಮ ಕರ್ತನಾದ ಯೇಸು ಕ್ರಿಸ್ತನ ಸ್ವಸ್ಥ ವಾಕ್ಯಗಳಿಗೂ, ಭಕ್ತಿಯ ಪ್ರಕಾರವಾದ ಉಪದೇಶಕ್ಕೂ

1. ಆಯಲ್ಪಟ್ಟ ದೂತರೆಂಬುವದು, ದೇವರ ಸನ್ನಿಧಾನದಲ್ಲಿ ಸದಾಕಾಲವೂ ಊಳಿಗ ಮಾಡುವದಕ್ಕಾಗಿ ದೇವರಿಂದ ಆದುಕೊಳ್ಳಲ್ಪಟ್ಟ ದೂತರನ್ನು ಕುರಿತದ್ದು.

2. ಚನ್ನಾಗಿ ವಿಚಾರಾಲೋಚನೆ ಮಾಡದೆ ಯಾವನ ಮೇಲೆಯೂ ಫಕ್ಕನೆ ಕೈಗಳನ್ನಿಟ್ಟು ಬೋಧಕೋದ್ಯೋಗಕ್ಕೆ ನೇಮಿಸ ಬಾರದು. ಹಾಗೆ ಮಾಡಿದರೆ, ಅವರ ಅಯುಕ್ತವಾದ ನಡತೆಯಿಂದ ಉಂಟಾಗುವ ಪಾಪಗಳಲ್ಲಿ ನೀನು ಪಾಲುಗಾರನಾಗಿರುವಿ. ಮತ್ತು ತಿಮೊಥೆಯನು ತಾನೇ ಎಲ್ಲರ ಮುಂದೆ ನಿರ್ಮಲನಾಗಿ ನಡೆಯ ಬೇಕು.

3. ತಂದೆಯು ತನ್ನ ಬಲಹೀನ ಮಗುವಿಗೋಸ್ಕರ ಚಿಂತೆ ಪಡುವ ಪ್ರಕಾರ ಪೌಲನು ತನ್ನ ಉತ್ತಮ ಕುಮಾರನಾದ ತಿಮೊಥೆಯನಿಗೋಸ್ಕರ ಚಿಂತೆ ಪಡುತ್ತಾನೆ. ತಿಮೊಥೆಯನು ಸ್ವಾಭಾವಿಕವಾಗಿ ಬಹಳ ಬಲಿಷ್ಠನೂ ಸುಖವುಳ್ಳವನೂ ಅಲ್ಲವೆಂದು ತೋರುತ್ತದೆ. ಆದದರಿಂದ ಅವನು ಈಡೇರಿಸ ಬೇಕಾದ ದೊಡ್ಡ ಕೆಲಸಗಳನ್ನು ಕುರಿತು ಅವನಿಗೆ ಯೋಚನೆ ಹೇಳುವಾಗ ಅದನ್ನು ಸ್ವಲ್ಪ ನಿಲ್ಲಿಸಿ, ಆ ಕೆಲಸವನ್ನು ಪೂರೈಸ ತಕ್ಕ ಶರೀರಬಲವೂ ಮನೋಬಲವೂ ಅವನಿಗೆ ಉಂಟಾಗ ತಕ್ಕದ್ದಾಗಿ, ಅವನು ಕೆಲ ಸಮಯಗಳಲ್ಲಿ ಔಷಧಪ್ರಾಯವಾಗಿ ಸ್ವಲ್ಪ ದ್ರಾಕ್ಷೇ ರಸವನ್ನು ಕುಡಿಯ ಬಹುದೆಂದು ಪೌಲನು ಯೋಚನೆ ಹೇಳುತ್ತಾನೆ. ಆದರೆ ಇದು ಲಾಹರಿಯಾಗುವ ಹಾಗಲ್ಲ. ಹೆಂಡ, ಸಾರಾಯಿ ಮುಂತಾದ ಲಾಹರಿ ಪದಾರ್ಥಗಳನ್ನು ಮನಸ್ಸು ಬಂದಷ್ಟು ಕುಡಿದು ಮತ್ತರಾಗುವ ಮದ್ಯಪಾನಿಗಳು ದೇವರ ರಾಜ್ಯವಾದ ಪರಲೋಕದಲ್ಲಿ ಶೇರಲಾರರೆಂದು ಸತ್ಯವೇದವು ಹೇಳುತ್ತದೆ. (೧ ಕೊರಿ. ೬. ೧೦.)

4. ಕೆಲವರ ಪಾಪಗಳು ಅಘೋರವಾದವುಗಳಾಗಿಯೂ ಪ್ರಕಟವಾದವುಗಳಾಗಿಯೂ ಇರುವದರಿಂದ ಅವು ಅವರನ್ನು ವಿಚಾರಣೆಗೆ ತೆಗೆದು ಕೊಂಡು ಹೋಗುವ ಸೇವಕರ ಹಾಗೆ ಮುಂದೆ ಬರುತ್ತವೆ. ಕೆಲವರ ಪಾಪಗಳು ಅಂತರಂಗವಾಗಿರುವದರಿಂದ ಅವು ತರುವಾಯ ತೋರ ಬರುವವು. ಹೀಗೆಯೇ ಸತ್ಕ್ರಿಯೆಗಳು ಸಹ ಇರುತ್ತವೆ. ಕೆಲವರ ಸತ್ಕ್ರಿಯೆಗಳು ಬಹಿರಂಗವಾಗಿಯೂ ಕೆಲವರ ಕ್ರಿಯೆಗಳು ಅಂತರಂಗವಾಗಿಯೂ ಇರುತ್ತವೆ. ಆದದರಿಂದ ಅವರವರ ಗುಣಗಳನ್ನೂ ಕ್ರಿಯೆಗಳನ್ನೂ ಚನ್ನಾಗಿ ನಿಧಾನಿಸಿ ಪೂರಾ ವಿಚಾರಿಸಿ ಅದಕ್ಕೆ ತಕ್ಕದ್ದಾಗಿ ಅವರಿಗೆ ತೀರ್ಪು ಮಾಡುವದು ಒಳ್ಳೇದು ಎಂದು ಪೌಲನು ಹೇಳುತ್ತಾನೆ.

5. ದಾಸತ್ವದ ಕೆಲಸ ಮಾಡುವವರು ಭಾರವಾದ ನೊಗವನ್ನು ಹೊರುವವರ ಹಾಗಿದ್ದಾರೆ. ಆದಾಗ್ಯೂ ಕ್ರೈಸ್ತರಾದ ದಾಸರು ದೇವರ ಹೆಸರಿಗೂ ಸತ್ಯ ಉಪದೇಶಕ್ಕೂ ಅಪಕೀರ್ತಿ ಬಾರದ ಹಾಗೆ ತಮ್ಮ ಯಜಮಾನರನ್ನು ಘನವಾಗಿ ಎಣಿಸಿ ಅವರಿಗೆ ವಿಧೇಯರಾಗಿ ನಡಿಯ ತಕ್ಕದ್ದು.

6. ತಮ್ಮಿಂದ ಕೆಲಸ ಮಾಡಿಸುವ ಯಜಮಾನರು ದೇವಭಕ್ತರೂ ವಿಶ್ವಾಸಿಗಳೂ ಪ್ರಿಯರೂ ಆಗಿರುವದರಿಂದ ಅವರಿಗೆ ಅಧಿಕ ಉತ್ಸಾಹದಿಂದ ಸೇವೆ ಮಾಡ ತಕ್ಕದ್ದು ದಾಸರ ಹಂಗು. ಅವಿಶ್ವಾಸಿಗಳಾದ ಯಜಮಾನರಿಗೂ ಸುವಾರ್ತೆಯ ನಿಮಿತ್ತ ಒಳ್ಳೇ ಸೇವೆ ಮಾಡ ಬೇಕು. ವಿಶ್ವಾಸಿಗಳಾದ ಯಜಮಾನರಿಗೂ ಸುವಾರ್ತೆಯ ನಿಮಿತ್ತವೂ ಅವರು ಭಕ್ತರಾಗಿರುವ ನಿಮಿತ್ತವೂ ಅಧಿಕ ಉತ್ಸಾಹದಿಂದ ಸೇವೆ ಮಾಡ ಬೇಕು. ಯಜಮಾನರೂ ಸೇವಕರೂ ದಾಸರೂ ಕ್ರಿಸ್ತನ ಭಕ್ತರಾಗಿರುವದರಿಂದ ಜನರ ಕಟ್ಟುಪಾಟಗು ಪ್ರಮಾಣಗಳಿಗೂ ಏನೂ ನ್ಯೂನತೆ ಉಂಟಾಗುವದಿಲ್ಲವೆಂದು ತಿಳಿಯ ಬೇಕು.



೪ ಒಪ್ಪದೆ, [1]ಬೇರೆ ಬೋಧನೆ ಹೇಳಿದರೆ, ಅಂಥವನು ಗರ್ವಿಸಿ, ಏನೂ ತಿಳಿಯದೆ, ತರ್ಕಗಳನ್ನೂ ವಾಗ್ವಾದಗಳ
ನ್ನೂ ಮಾಡುವ [2]ರೋಗದಲ್ಲಿದ್ದಾನೆ. ಇವುಗಳಿಂದ ಹೊಟ್ಟೆಕಿಚ್ಚೂ, ಝುಗಳವೂ, ದೂಷಣೆಗಳೂ, ಕೆಟ್ಟ ಸಂದೇ
೫ ಹಗಳೂ, ಬುದ್ಧಿ ಕೆಟ್ಟು, ಸತ್ಯವನ್ನು ಕಳಕೊಂಡು, [3]ಲಾಭವೇ ಭಕ್ತಿ ಎಂದು ನೆನಸುವ ಮನುಷ್ಯರ ವ್ಯರ್ಥ
೬ ವಾಗ್ವಾದಗಳೂ ಆಗುತ್ತವೆ. ಅಂಥವರಿಗೆ ದೂರವಾಗು. ಆದರೆ ತುಷ್ಟಿಯ ಸಹಿತವಾದ ಭಕ್ತಿಯು ದೊಡ್ಡ
೭ ಲಾಭವಾಗಿದೆ. ಯಾಕಂದರೆ, ನಾವು ಲೋಕದಲ್ಲಿ ಏನೂ ತಕ್ಕೊಂಡು ಬರಲಿಲ್ಲ, ಏನೂ ತಕ್ಕೊಂಡು
೮ ಹೋಗಲಾರೆವೆಂಬುವದು ಪ್ರಕಟವಾಗಿದೆ. ಆದದರಿಂದ ನಮಗೆ ಅನ್ನವಸ್ತ್ರವಿದ್ದರೆ, ಅದು [4]ಸಾಕೆಂದೆಣಿಸುವ.
೯ ಆದರೆ ಐಶ್ವರ್ಯವಂತರಾಗ [5]ಇಚ್ಛೈಸುವವರು ಶೋಧನೆಯಲ್ಲಿಯೂ, ಉರುಲಿನಲ್ಲಿಯೂ, ಬುದ್ಧಿ ಇಲ್ಲದ
ನಷ್ಟವುಳ್ಳ ಅನೇಕ ಆಶೆಗಳಲ್ಲಿಯೂ ಬೀಳುತ್ತಾರೆ; ಅವು ಮನುಷ್ಯರನ್ನು ನಾಶನದಲ್ಲಿಯೂ ಲಯದಲ್ಲಿಯೂ
೧೦ ಮುಣುಗಿಸುತ್ತವೆ. ಯಾಕಂದರೆ ದ್ರವ್ಯಾಶೆಯು ಸಕಲ ಕೇಡುಗಳ [6]ಬೇರಾಗಿದೆ. ಅದನ್ನು ಕೆಲವರು
ಆಶಿಸಿ, ವಿಶ್ವಾಸವನ್ನು ಬಿಟ್ಟು, ತಪ್ಪಿ ಹೋಗಿ, ತಮ್ಮನ್ನು ಅನೇಕ ವೇದನೆಗಳಿಂದ ತಿವಿದು ಕೊಂಡಿದ್ದಾರೆ.
೧೧ ಆದರೆ ನೀನು, ಓ [7]ದೇವರ ಮನುಷ್ಯನೇ, ಅವುಗಳನ್ನು ಬಿಟ್ಟು ಹೋಗು; ನೀತಿ, ಭಕ್ತಿ, ವಿಶ್ವಾಸ, ಪ್ರೀತಿ,
೧೨ ತಾಳ್ಮೆ, ಸಾತ್ವಿಕತ್ವಗಳನ್ನು [8]ಹಿಂದಟ್ಟು; ವಿಶ್ವಾಸದ ಒಳ್ಳೇ ಹೋರಾಟವನ್ನು ಹೋರಾಡು; ನಿತ್ಯಜೀವ
ವನ್ನು ಹಿಡಿದುಕೋ. ಅದಕ್ಕೆ ಕರೆಯಲ್ಪಟ್ಟು, ಅನೇಕ ಸಾಕ್ಷಿಗಳ ಮುಂದೆ [9]ಒಳ್ಳೇ ಅರಿಕೆಯನ್ನು ಅರಿಕೆ
೧೩ ಮಾಡಿದಿ. ಸರ್ವವನ್ನು ಬದುಕಿಸುವ ದೇವರು, ಪೊಂತ್ಯ ಪಿಲಾತನ ಕಾಲದಲ್ಲಿ ಒಳ್ಳೇ ಅರಿಕೆಯನ್ನು ಸಾ

1. ಭಕ್ತೀ ವಿಷಯದಲ್ಲಿಯೂ ನಡತೆಯ ವಿಷಯದಲ್ಲಿಯೂ ಕ್ರಿಸ್ತನ ಮಾರ್ಗದ ಬೋಧನೆಗಳೆಲ್ಲಾ ಸ್ವಸ್ಥ ಮನಸ್ಸಿಗೂ ದೇವಭಕ್ತಿಗೂ ಪ್ರೇರೇಪಿಸುವವುಗಳಾಗಿವೆ. (ತೀತ. ೧. ೧.) ಇವುಗಳಿಗೆ ವಿರೋಧವಾದ ಬೋಧನೆಯಿಂದ ಅಪಭಕ್ತಿ ಬೆಳಿಯುವದೇ ಹೊರ್ತು ಪ್ರಯೋಜನವೇನೂ ಇಲ್ಲ.

2. ಸತ್ಯೋಪದೇಶದಿಂದ ಮನಸ್ಸಿಗೆ ಸ್ವಸ್ಥತೆ ಉಂಟಾಗುವ ಪ್ರಕಾರ (೩. ವ.) ಅಸತ್ಯೋಪದೇಶದಿಂದ ಮನಸ್ಸಿಗೆ ರೋಗ ಉಂಟಾಗುತ್ತದೆ. ಅಜ್ಞಾನದಿಂದ ಉಂಟಾಗುವ ಗರ್ವವೂ, ವಾಗ್ವಾದದಿಂದುಂಟಾಗುವ ಹೊಟ್ಟೆಕಿಚ್ಚೂ, ಝುಗಳವೂ, ದೂಷಣೆಗಳೂ, ಕೆಟ್ಟ ಸಂದೇಹಗಳೂ, ಕೆಟ್ಟ ಯೋಚನೆಗಳೂ ಮನಸ್ಸಿನ ಸ್ವಸ್ಥತೆಯನ್ನು ಕೆಡಿಸುವ ರೋಗವಾಗಿರುತ್ತದೆ.

3. ದೇವಭಕ್ತಿಯನ್ನು ಒಂದು ವ್ಯಾಪಾರದ ಹಾಗೆ ಎಣಿಸಿ ಆದಾಯವನ್ನು ಹುಡುಕುವವರು ಸತ್ಯವನ್ನು ಕಳಕೊಳ್ಳುವವರಾಗಿದ್ದಾರೆ. ಸ್ವಪ್ರಯೋಜನವನ್ನು ಹುಡುಕಿ ಕ್ರಿಸ್ತನ ಮಾರ್ಗವನ್ನು ಅನುಸರಿಸುವವರು ಉತ್ತಮ ಕ್ರೈಸ್ತರಲ್ಲ. ತುಷ್ಟಿಯ ಸಹಿತವಾದ ಭಕ್ತಿಯು ದೊಡ್ಡ ಲಾಭವೇ. ಐಶ್ವರ್ಯವು ಶಾಶ್ವತವೆಂದೆಣಿಸದೆ ಅನ್ನವಸ್ತ್ರವಿದ್ದರೆ ಸಾಕೆಂಬ ಮನೋತೃಪ್ತಿಯಿಂದ ನಡಿಯುವ ಭಕ್ತಿಯು ಲಾಭಕರವಾದದ್ದೇ ಸರಿ. ಆದರೆ ಲಾಭಕ್ಕೋಸ್ಕರ ಭಕ್ತಿಯ ವೇಷವನ್ನು ಧರಿಸುವವರು ಅಸತ್ಯವಂತರಾಗಿದ್ದಾರೆ. ಅಂಥವರಿಗೆ ದೂರವಾಗಿರುವದು ಒಳ್ಳೇದು.

4. ಬೆಳ್ಳಿಯ ವ್ಯಾಪಾರಕ್ಕಿಂತಲೂ, ಅಪರಂಜಿಯ ಆದಾಯಕ್ಕಿಂತಲೂ ಉತ್ತಮವಾಗಿರುವ (ಸಾಮತಿ. ೩. ೧೪.) ದೇವಭಕ್ತಿಯು ನಿಜವಾದ ದ್ರವ್ಯವನ್ನು ಹುಡುಕುವ ಹಾಗೆ ಪ್ರೇರೇಪಿಸುತ್ತದೆ. ಅದು ನಾವು ಲೋಕದಲ್ಲಿ ಬಂದ ಸ್ಥಿತಿಯನ್ನೂ ಇದನ್ನು ಬಿಟ್ಟು ಹೋಗುವ ಸ್ಥಿತಿಯನ್ನೂ ನಮಗೆ ತೋರಿಸಿ, ಅನ್ನವಸ್ತ್ರದಲ್ಲಿ ತೃಪ್ತಿಯನ್ನೂ ಪರಲೋಕದ ವಾಂಛೆಯನ್ನೂ ನಮ್ಮಲ್ಲಿ ಹುಟ್ಟಿಸುತ್ತದೆ.

5. ನ್ಯಾಯದ ಪ್ರಕಾರ ಬರುವ ಐಶ್ವರ್ಯವು ಪಾಪವಾದದ್ದಲ್ಲ; ಅನ್ಯಾಯದಿಂದ ಐಶ್ವರ್ಯ ಸಂಪಾದಿಸುವದಕ್ಕೆ ಪ್ರಯಾಸಪಡುವದೇ ಪಾಪವು. (ದ್ವಿತೀಯ ನ್ಯಾ. ೮. ೧೮.) ಆದರಿಂದ ಶರೀರಕ್ಕೂ ಆತ್ಮಕ್ಕೂ ಕಠಿಣ ನಾಶ ಸಂಭವಿಸುವದು.

6. ಬೇರಿನಿಂದ ಮರವು ಚಿಗುರಿ ಬೆಳೆಯುವ ಪ್ರಕಾರ, ದ್ರವ್ಯಾಶೆ ಎಂಬ ಬೇರಿನಿಂದ ಸಕಲ ಕೇಡುಗಳೂ ಬೆಳೆಯುತ್ತವೆ. ಅದರಿಂದ ಅನೇಕರು ವಿಶ್ವಾಸವನ್ನು ಬಿಟ್ಟು ತೊಲಗಿ ಹೋಗಿ, ಅನೇಕ ವೇದನೆಗಳಿಂದ ತಮ್ಮನ್ನು ತಿವಿದು ಕೊಂಡರು. ದ್ರವ್ಯಾಶೆ ಎಂಬ ಬೇರಿನಿಂದ ಹುಟ್ಟಿದ ಮುಳ್ಳುಗಳಿಂದ ತಮ್ಮ ಶರೀರವನ್ನೂ ಆತ್ಮವನ್ನೂ ಘಾತ ಮಾಡಿ ಕೊಂಡರು. ಯೂದ ಇಸ್ಕರಿಯೋತನು ಇದಕ್ಕೆ ದೃಷ್ಟಾಂತವಾಗಿದ್ದಾನೆ.

7. ಲೋಕದ ಮನುಷ್ಯನಾಗಿರದೆ, ದೇವರ ಮನುಷ್ಯನಾಗಿದ್ದ ತಿಮೊಥೆಯನು, ಲೋಕದ ಮಹಿಮೆಯನ್ನು ಅಲಕ್ಷ್ಯ ಮಾಡಿ, ದೇವರ ಮಹಿಮೆಯನ್ನು ಕೋರಿ, ವಿಶ್ವಾಸದ ಹೋರಾಟವನ್ನು ಮುಗಿಸಿ, ಉಪದ್ರದ ಮೂಲವಾಗಿ ಪರಲೋಕಕ್ಕೆ ಶೇರಿದ ಯೇಸು ಕರ್ತನ ಸನ್ನಿಧಿಯಲ್ಲಿ ಉತ್ತಮನಾಗಿ ನಡೆದು ಕೊಂಡರೆ, ಆತನು ನಿತ್ಯಜೀವವನ್ನು ಅನುಗ್ರಹಿಸುವನೆಂದು ಪೌಲನು ಹೇಳುತ್ತಾನೆ.

8. ದ್ರವ್ಯಾಶೆ ಮುಂತಾದ ಕೇಡುಗಳಿಗೆ ತೊಲಗಿ ಓಡ ಬೇಕು. ವಿಶ್ವಾಸ, ಪ್ರೀತಿ, ತಾಳ್ಮೆ, ಶಾಂತಿ ಎಂಬುವ ಮನೋಧರ್ಮಗಳನ್ನು ಸಾಧಿಸ ಬೇಕು. ದೇವರ ಪ್ರೀತಿಯು ಮನಸ್ಸಿನಲ್ಲಿ ನೆಲೆಯಾಗಿದ್ದರೆ, ಲೋಕದ ಆಶೆಯು ತೊಲಗಿ ಹೋಗುವದು.

9. ಒಳ್ಳೇ ಅರಿಕೆ ಎಂಬುವದು, ತಿಮೊಥೆಯನು ಅನೇಕರ ಮುಂದೆ ದೇವರ ಸೇವೆಯನ್ನು ಹೊಂದಿದ ಸಮಯದಲ್ಲಿ ಮಾಡಿದ ಶ್ರೇಷ್ಠ ಉಪದೇಶವನ್ನು ಕುರಿತದ್ದೆಂದು ತೋರುತ್ತದೆ. (೧. ೧೮; ೪. ೧೪. ಅಪೊ. ಕ್ರಿ. ೧೬. ೧—೩.) ಆವನು ಆ ಸಮಯದಲ್ಲಿ ಮಾಡಿದ್ದೂ ಪರಮ ಗುರುವಿನಿಂದ ಸಾಕ್ಷಿ ಇಡಲ್ಪಟ್ಟದ್ದೂ ಆದ (೧೩. ವ.) ಅರಿಕೆಯು ಮುಖ್ಯ ಸತ್ಯವನ್ನು ಕುರಿತದ್ದಾಗಿದ್ದದರಿಂದ ಒಳ್ಳೇ ಅರಿಕೆ ಎಂದು ಹೇಳಲ್ಪಡುತ್ತದೆ.

೧೪ ಕ್ಷಿಯಾಗಿ ಮಾಡಿದ ಕ್ರಿಸ್ತ ಯೇಸುವು, ಇವರ ಮುಂದೆ ನಿನಗೆ ಆಜ್ಞಾಪಿಸುವದೇನಂದರೆ— ನೀನು [1]ಆಜ್ಞೆ
ಯನ್ನು ನಿರ್ಮಲವಾಗಿಯೂ ನಿರ್ದೋಷವಾಗಿಯೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ
೧೫ ವರೆಗೆ ಕೈಕೊಳ್ಳ ಬೇಕು. [2]ಅದನ್ನು ಸ್ವಂತ ಕಾಲಗಳಲ್ಲಿ ಭಾಗ್ಯವುಳ್ಳ ಏಕ ಪ್ರಭುವು, ಅರಸುಗಳ ಅರಸನು,
೧೬ [3]ಕರ್ತರ ಕರ್ತನು, ಒಬ್ಬನೇ ಅಮರತ್ವವುಳ್ಳವನು, ಅಪ್ರವೇಶ್ಯವಾದ ಬೆಳಕಿನಲ್ಲಿ ವಾಸ ಮಾಡಿ, ಮನುಷ್ಯರಲ್ಲಿ
ಯಾರಿಗೂ ಕಾಣಿಸದೆ, ಕಾಣಿಸ ಕೂಡದೆ, ಇರುವವನು ತೋರಿಸುವನು. ಅವನಿಗೆ ಮಾನವೂ ನಿತ್ಯ ತ್ರಾ
ಣವೂ ಆಗಲಿ. ಆಮೆನ್.
೧೭ ಈಗಿನ ಲೋಕದ ಐಶ್ವರ್ಯವಂತರಿಗೆ, ಉನ್ನತವಾದವುಗಳ ಮೇಲೆ ಮನಸ್ಸಿಡದೆ, [4]ಅಸ್ಥಿರವಾದ ಐಶ್ವರ್ಯದಲ್ಲಿ
ಅಲ್ಲ, ಐಶ್ವರ್ಯವಾಗಿ ನಮಗೆ ಎಲ್ಲವನ್ನು [5]ಅನುಭವಿಸುವದಕ್ಕೆ ದಯಪಾಲಿಸುವ ಜೀವವುಳ್ಳ ದೇವರಲ್ಲಿಯೇ
೧೮ ನಿರೀಕ್ಷಿಸಿ, ಉಪಕಾರಿಗಳೂ, ಸತ್ಕ್ರಿಯೆಗಳಲ್ಲಿ ಐಶ್ವರ್ಯವಂತರೂ, ಧರ್ಮಿಷ್ಠರೂ, ಅನ್ಯೋನ್ಯ ಪ್ರಿಯರೂ,
೧೯ ಆಗಿದ್ದು, [6]ನಿತ್ಯಜೀವವನ್ನು ಹಿಡಿದು ಕೊಳ್ಳುವ ಹಾಗೆ, ಬರುವ ಕಾಲಕ್ಕಾಗಿ ತಮಗೆ ಒಳ್ಳೇ [7]ಅಸ್ತಿವಾರ
ವನ್ನು ಇಟ್ಟು ಕೊಳ್ಳ ಬೇಕೆಂದು, ಆಜ್ಞಾಪಿಸು.
೨೦ ಓ ತಿಮೊಥೆಯನೇ! ನಿನಗೆ [8]ಒಪ್ಪಿಸಲ್ಪಟ್ಟದ್ದನ್ನು ಕಾಪಾಡು. ಅಪಭ್ರಷ್ಟವಾದ ವ್ಯರ್ಥ ಶಬ್ದಗಳಿಗೂ, ಸುಳ್ಳು
೨೧ ಹೆಸರುಳ್ಳ [9]ಜ್ಞಾನದ ತರ್ಕಗಳಿಗೂ ದೂರವಾಗಿರು. ಈ ಜ್ಞಾನವನ್ನು ಕೆಲವರು ಹೇಳಿ ಕೊಂಡು, ವಿಶ್ವಾಸದ
ವಿಷಯದಲ್ಲಿ ತಪ್ಪಿದರು. ಕೃಪೆಯು ನಿನ್ನ ಸಂಗಡ ಇರಲಿ. ಆಮೆನ್.

---

1. ಆಜ್ಞೆ ಎಂಬುವದು ದಿವ್ಯ ಸತ್ಯಗಳನ್ನು ಕುರಿತ ಸನ್ಮಾರ್ಗಕ್ಕೆ ತಕ್ಕ ಕಟ್ಟಳೆಯನ್ನು ಕುರಿತದ್ದೆಂದು ತೋರುತ್ತದೆ. (೧. ೫.)

2. ಯೇಸು ಕ್ರಿಸ್ತನ ಪ್ರತ್ಯಕ್ಷತೆಯು ಮಹಾ ದೇವರು ಕುರಿತ ಕಾಲದಲ್ಲಿ ಸಂಭವಿಸುವದು. ಆ ದಿವಸದಲ್ಲಿ ತಮ್ಮ ಉಗ್ರಾಣಿಕ ಉದ್ಯೋಗವನ್ನು ಕುರಿತು ಸಂತೋಷವಾಗಿ ಲೆಖ್ಖ ಒಪ್ಪಿಸುವ ಉತ್ತಮ ಬೋಧಕರು ಈಗ ದಿವ್ಯ ಸತ್ಯಕ್ಕೆ ಅನುಸಾರವಾಗಿ ಅಪರಾಧವೂ ಕಳಂಕವೂ ಇಲ್ಲದವರಾಗಿ ನಡಿಯ ತಕ್ಕದ್ದು.

3. ದೇವರಾಗಿರುವ ತಂದೆಗೆ ತಕ್ಕ ಈ ಹೆಸರುಗಳು, ದೇವರಾಗಿರುವ ಕುಮಾರನಿಗೂ ಹೇಳಲ್ಪಡುತ್ತವೆ. (ಪ್ರಕಟ. ೧೭. ೧೪; ೧೯. ೧೬.)

4. ಐಶ್ವರ್ಯವನ್ನೂ ಅದನ್ನು ಅನುಭವಿಸುವದನ್ನೂ ಕುರಿತು ಚನ್ನಾಗಿ ಆಲೋಚಿಸಿದರೆ, ಅದು ಅಸ್ಥಿರವಾದದ್ದೆಂದು ನಿರ್ಣಯಿಸ ಬೇಕು. (ಸಾಮತಿ. ೨೩. ೪, ೫.)

5. ಕರುಣೆಯುಳ್ಳ ದೇವರು ದಯಪಾಲಿಸುವ ಐಶ್ವರ್ಯದಿಂದ ಮತ್ತೊಬ್ಬರಿಗೆ ಮೇಲು ಮಾಡುವದೇ ಅದನ್ನು ಅನುಭವಿಸುವ ಉತ್ತಮ ರೀತಿಯು. (೧೮. ವ.)

6. ನಿತ್ಯಜೀವ ಎಂಬುವದಕ್ಕೆ ಅನೇಕ ಮುಖ್ಯ ಕೈಬರಹದ ಪ್ರತಿಗಳಲ್ಲಿ ನಿಜವಾದ ಜೀವ ಎಂಬದಾಗಿ ಉಂಟು. (ಲೂಕ. ೧೨. ೧೪, ೧೫. ವಚನಗಳ ವ್ಯಾಖ್ಯಾನ ನೋಡ ಬೇಕು.)

7. (ಲೂಕ. ೧೬. ೯—೧೩. ವಚನಗಳ ವ್ಯಾಖ್ಯಾನ ನೋಡ ಬೇಕು.) ಪ್ರೀತಿಯ ಕ್ರಿಯೆಗಳು ಬರುವ ಕಾಲದಲ್ಲಿ ಸುಖವನ್ನೂ ಭಾಗ್ಯವನ್ನೂ ಹೊಂದುವದಕ್ಕೆ ಒಳ್ಳೇ ಆಧಾರವಾಗಿರುತ್ತವೆ. ಯಾಕಂದರೆ ದೇವರು ಒಬ್ಬೊಬ್ಬನಿಗೂ ಅವನವನ ಕ್ರಿಯೆಗಳಿಗೆ ತಕ್ಕ ಫಲವನ್ನು ಕೊಡುವನು. (ಪ್ರಕಟ. ೨. ೨೩.)

8. ಶುದ್ಧ ಸುವಾರ್ತೆಯ ಸತ್ಯ ಬೋಧನೆಗಳು ತಿಮೊಥೆಯನಿಗೆ ಒಂದು ಬೊಕ್ಕಸದೋಪಾದಿಯಾಗಿ ಒಪ್ಪಿಸಲ್ಪಟ್ಟ ದ್ರವ್ಯವಾಗಿತ್ತು. ಅದನ್ನು ಮತ್ತೊಬ್ಬರಿಗೆ ಕೊಡುವದಕ್ಕಾಗಿಯೇ ಅವನಿಗೆ ಒಪ್ಪಿಸಲ್ಪಟ್ಟಿತು. (೨ ತಿಮೊ. ೧. ೧೩, ೧೪.)

9. ಕ್ರಿಸ್ತನ ಮತವಾದ ಸತ್ಯಮಾರ್ಗವೇ ನಿಜವಾದ ಜ್ಞಾನವು. (೧ ಕೊರಿ. ೧೩. ೮.) ಅದಕ್ಕೆ ವಿರೋಧವಾಗಿರುವದು ಜ್ಞಾನವೆಂದು ಸುಳ್ಳು ಹೆಸರುಳ್ಳ ಅಭಿಪ್ರಾಯಗಳೇ. ಅದು ತಪ್ಪಾದ ವ್ಯರ್ಥ ಮಾತುಗಳಿಂದ ಸುವಾರ್ತೆಯ ಸತ್ಯವನ್ನು ವಿರೋಧಿಸುತ್ತದೆ. ಈ ಸುಳ್ಳು ಮತವು ಆ ಕಾಲದಲ್ಲಿಯೇ ಸಭೆಯಲ್ಲಿ ಹೊಕ್ಕು ತರುವಾಯ ಲೋಕಜ್ಞಾನಿಗಳಾದ ವೇದಭ್ರಷ್ಟರ ಮೂಲಕವಾಗಿ ಅಧಿಕವಾದ ಕೇಡನ್ನು ಉಂಟು ಮಾಡಿತು. ಅನೇಕರು ವಿಶ್ವಾಸಮಾರ್ಗವನ್ನು ಬಿಟ್ಟು ತೊಲಗುವ ಹಾಗೆ ಮಾಡಿದ ಈ ವಿಪರೀತ ಜ್ಞಾನವಾದಕ್ಕೆ ತೊಲಗುವ ಹಾಗೆ ಪೌಲನು ತಿಮೊಥೆಯನಿಗೆ ಪ್ರೀತಿಯಿಂದ ಬುದ್ಧಿ ಹೇಳಿ, ದೇವರ ಆಶೀರ್ವಾದದಿಂದ ಅವನನ್ನು ಹರಸಿ, ಪತ್ರಿಕೆಯನ್ನು ಮುಗಿಸುತ್ತಾನೆ.

# THE SECOND EPISTLE OF PAUL THE APOSTLE TO TIMOTHY.

## ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಬರೆದ ಎರಡನೇ ಪತ್ರಿಕೆಯ ಪೀಠಿಕೆ.

ಅಪೊಸ್ತಲನಾದ ಪೌಲನು ರೋಮಪುರಿಯಲ್ಲಿ ಶೆರೆಮನೆಯಲ್ಲಿದ್ದು, ರಕ್ತಸಾಕ್ಷಿಗಳ ಮರಣವು ತನಗೆ ಅತಿ ಶೀಘ್ರವಾಗಿ ಪ್ರಾಪ್ತಿಸುವದೆಂದು ನಿರೀಕ್ಷಿಸುತ್ತಾ ಇದ್ದ ಕಾಲದಲ್ಲಿ ಈ ಪತ್ರಿಕೆಯು ಬರಿಯಲ್ಪಟ್ಟಿತೆಂದು ತೋರುತ್ತದೆ. (೧. ೮, ೧೬, ೧೭; ೪. ೬.) ಅಪೊಸ್ತಲರ ಕ್ರಿಯೆಗಳ ೨೮ನೇ ಸಂಧಿಯಲ್ಲಿ, ಅವನು ಶೆರೆಯಲ್ಲಿದ್ದನೆಂದು ಹೇಳಲ್ಪಟ್ಟದ್ದನ್ನು ಆಧಾರ ಮಾಡಿ ಕೊಂಡು, ಅವನು ಸಾಯುವ ಮಟ್ಟಿಗೂ ಅದೇ ಶೆರೆಯಲ್ಲಿದ್ದನೆಂದೂ, ಆ ಕಾಲದಲ್ಲಿಯೇ ಈ ಪತ್ರಿಕೆ ಬರಿಯಲ್ಪಟ್ಟಿತೆಂದೂ ಕೆಲವರು ನೆನಸುತ್ತಾರೆ. ಆದರೆ ತಿಮೊಥೆಯನ ಮೊದಲನೇ ಪತ್ರಿಕೆಯ ಪೀಠಿಕೆಯಲ್ಲಿ ಹೇಳಿದ ನ್ಯಾಯಗಳನ್ನೂ ಈ ಪತ್ರಿಕೆಯಲ್ಲಿರುವ ನ್ಯಾಯಗಳನ್ನೂ ಯೋಚಿಸಿ ನೋಡುವಾಗ, ಅವರ ಅಭಿಪ್ರಾಯವು ಸರಿಯಲ್ಲವೆಂದು ತೋರುವದು. "ನಾನು ತ್ರೋಯದಲ್ಲಿ ಕರ್ಪನ ಹತ್ತರ ಬಿಟ್ಟು ಬಂದ ಮೇಲಂಗಿಯನ್ನೂ, ಪುಸ್ತಕಗಳನ್ನೂ, ಮುಖ್ಯವಾಗಿ ತೊಗಲುಕಾಗದಗಳನ್ನೂ ಬರುವಾಗ ತೆಗೆದು ಕೊಂಡು ಬಾ" ಎಂದು ೪. ೧೩ಲ್ಲಿಯೂ; "ಎರಸ್ತನು ಕೊರಿಂಥದಲ್ಲಿ ನಿಂತನು, ತ್ರೊಫಿಮನನ್ನು ಅಸೌಖ್ಯವಾಗಿ ಮಿಲೇತದಲ್ಲಿ ಬಿಟ್ಟೆನು" ಎಂದು ೪. ೨೦ಲ್ಲಿಯೂ, ಹೇಳಿರುವದನ್ನು ಯೋಚಿಸುವಾಗ, ಇವು ಅಪೊಸ್ತಲರ ಕ್ರಿಯೆಗಳ ೨೮ನೇ ಸಂಧಿಯಲ್ಲಿ ಹೇಳಲ್ಪಟ್ಟ ಕಾಲದಲ್ಲಿ ಬರೆಯಲ್ಪಡಲಿಲ್ಲವೆಂದು ಪ್ರತ್ಯಕ್ಷವಾಗಿ ತೋರುತ್ತದೆ. ಅದಕ್ಕೆ ಆರು ವರುಷಕ್ಕೆ ಮುಂಚೆ ಪೌಲನು ಕೊರಿಂಥ, ತ್ರೋಯ, ಮಿಲೇತ ಎಂಬ ಪಟ್ಟಣಗಳಿಗೆ ಹೋಗಿದ್ದನೆಂದೂ, (ಅಪೊ. ಕ್ರಿ. ೨೦. ೫, ೬, ೧೭.) ಆ ಪ್ರಯಾಣದಲ್ಲಿಯೂ ಅದರ ತರುವಾಯದ ಕಾಲದಲ್ಲಿಯೂ ತಿಮೊಥೆಯನು ಪೌಲನ ಸಂಗಡಲೇ ಇದ್ದನೆಂದೂ, ಯೆರೂಸಲೇಮು ಪಟ್ಟಣದಲ್ಲಿ ಪೌಲನು ಶತ್ರುಗಳಿಂದ ಹಿಡಿಯಲ್ಪಟ್ಟಾಗ ತ್ರೊಫಿಮನು ಅವನ ಸಂಗಡ ಇದ್ದದರಿಂದ (ಅಪೊ. ಕ್ರಿ. ೨೧. ೨೯.) ಮಿಲೇತದಲ್ಲಿ ಅವನು ನಿಲ್ಲಲಿಲ್ಲವೆಂಬುವದು ನಿಶ್ಚಯವಾಗಿಯೂ, ಚರಿತ್ರೆಯಿಂದ ಸ್ಪಷ್ಟವಾಗಿ ಕಾಣುವದರಿಂದ, ಈ ವರ್ತಮಾನಗಳು ಪೌಲನು ಮೊದಲನೇ ಸಾರಿ ಶೆರೆಯುವನಾಗಿದ್ದ ಕಾಲದ ತರುವಾಯ ಬೇರೆ ಕಾಲದಲ್ಲಿ ಮಾಡಿದ ಒಂದು ಪ್ರಯಾಣದಲ್ಲಿ ನಡೆದಿರ ಬೇಕೆಂದು ಉದ್ದೇಶಿಸ ತಕ್ಕದ್ದಾಗಿದೆ.

ಮತ್ತು ಈ ಅಭಿಪ್ರಾಯವನ್ನು ಸ್ಥಾಪಿಸುವದಕ್ಕೆ ತಕ್ಕ ಬೇರೆ ಕೆಲವು ಸಂಗತಿಗಳನ್ನು ಇದರಲ್ಲಿ ಕಾಣ ಬಹುದು. ಪೌಲನು ಮೊದಲನೇ ಸಾರಿ ಶೆರೆಯಲ್ಲಿದ್ದಾಗ ಬರೆದ ಪತ್ರಿಕೆಗಳಲ್ಲಿ ಅವನ ಸಂಗಡ ಇದ್ದರೆಂದು ಹೇಳಲ್ಪಟ್ಟ ಸ್ನೇಹಿತರು ಈ ಪತ್ರಿಕೆ ಬರಿಯಲ್ಪಟ್ಟ ಕಾಲದಲ್ಲಿ ಇರಲಿಲ್ಲ. (೪. ೧೦, ೧೧. ಕೊಲೊ. ೪. ೧೦, ೧೪.) ಇದು ಅಲ್ಲದೆ ಮೊದಲನೇ ಬಂಧನದಲ್ಲಿ ಅವನಿಗೆ ಉಂಟಾಗಿದ್ದ ಉಪದ್ರಕ್ಕಿಂತ ಈಗ ಅಧಿಕ ಉಪದ್ರ ಉಂಟಾಗಿತ್ತು. (೧. ೧೭, ೧೮. ಅಪೊ. ಕ್ರಿ. ೨೮. ೩೦, ೩೧. ಫಿಲಿ. ೧. ೧೩.) ಮೊದಲನೇ ಸಾರಿ ತನಗೆ ಬಿಡುಗಡೆ ಉಂಟಾಗುವದೆಂದು ನಂಬಿಕೆ ಉಂಟಾಗಿತ್ತು. ಈಗ ಅಂಥಾ ನಂಬಿಕೆ ಉಂಟಾಗಿತ್ತೆಂದು ತೋರಲಿಲ್ಲ. (೪. ೬. ಫಿಲಿ. ೧. ೨೫; ೨. ೨೪. ಫಿಲೆಮೋ. ೨೨. ವ.)

ಅಪೊಸ್ತಲನಾದ ಪೌಲನು ಎರಡನೇ ಸಾರಿ ರೋಮಪುರಿಯಲ್ಲಿ ಶೆರೆಯವನಾಗಿ ಬಂದ ಸ್ವಲ್ಪ ಕಾಲದ ತರುವಾಯ ಹೆಚ್ಚು ಕಡಿಮೆ ೬೬ನೇ ವರುಷದಲ್ಲಿ ಈ ಪತ್ರಿಕೆಯನ್ನು ಬರೆದನೆಂದು ತೋರುತ್ತದೆ. ಆ ಕಾಲದಲ್ಲಿ ತಿಮೊಥೆಯನು ಇದ್ದ ಸ್ಥಳವನ್ನು ಗೊತ್ತಾಗಿ ಹೇಳುವದಕ್ಕೆ ಹೇತುವೆ ಇಲ್ಲ; ಎಫೆಸ ಪಟ್ಟಣದಲ್ಲಾದರೂ ಚಿಕ್ಕ ಆಸ್ಯದ ಬೇರೊಂದು ಪಟ್ಟಣದಲ್ಲಾದರೂ ಇದ್ದಿರ ಭಹುದು. ಅದರಿಂದ ರೋಮಪುರಿಗೆ ತ್ರೋಯದ ಮಾರ್ಗವಾಗಿ ಹೋಗ ಬೇಕಾಗಿರುವದು. (೪. ೧೩.)

ಪೌಲನು ತನಗೆ ಆದರಣೆ ಹೇಳ ತಕ್ಕ ಇಷ್ಟರು ಒಬ್ಬರೂ ಇಲ್ಲವೆಂಬ ಯೋಚನೆಯಿಂದ ಈ ಪತ್ರಿಕೆಯನ್ನು ಬರೆದನೆಂದು ತೋರುತ್ತದೆ. ಆದ ಕಾರಣ ಅವನು ಮಾರ್ಕನನ್ನು ಕರಕೊಂಡು ಶೀಘ್ರವಾಗಿ ಬರ ಬೇಕೆಂದು ತಿಮೊಥೆಯನಿಗೆ ಆಜ್ಞಾಪಿಸುತ್ತಾನೆ. (೧. ೧೫; ೪. ೯—೧೧.) ಆದರೆ ಅವನನ್ನು ಮುಖಾಮುಖವಾಗಿ ಕಂಡು, ಬೇಕಾದ ಬುದ್ಧಿಮತಿಗಳನ್ನು ಹೇಳ ಬಹುದೆಂಬ ನಿಶ್ಚಯವು ಅವನಿಗೆ ಇಲ್ಲದ್ದರಿಂದ, ಅವನ ಸ್ಥಿತಿಗೆ ತಕ್ಕ ಬುದ್ಧಿಬೋಧನೆಗಳನ್ನು ತಂದೆಗಿರುವ ವಾತ್ಸಲ್ಯದಿಂದ ಈ ಪತ್ರಿಕೆಯನ್ನು ವಿಸ್ತಾರವಾಗಿ ಬರೆದು ತಿಳಿಸುತ್ತಾನೆ. ಕ್ರಿಸ್ತನ ಮಾರ್ಗದ ಪ್ರಧಾನ ಸತ್ಯೋಪದೇಶಗಳನ್ನು ವಿರೋಧಿಸಿದ ಕಳ್ಳಬೋಧಕರನ್ನು ಎದುರಿಸ ಬೇಕೆಂದೂ, ಕ್ರಿಸ್ತನ ದಿವ್ಯ ಸತ್ಯಗಳನ್ನು ಧೈರ್ಯವಾಗಿ ಸಾರ ಬೇಕೆಂದೂ, ಅದರಿಂದ ಉಂಟಾಗುವ ಉಪದ್ರವನ್ನು ತಾಳ್ಮೆಯಾಗಿ ಸಹಿಸ ಬೇಕೆಂದೂ, ದೇವರ ಉತ್ತಮ ದಾಸರಿಗೆ ಸಂಭವಿಸುವ ಉಪದ್ರದಲ್ಲಿ ಅವನು ಸಹ ಉತ್ಸಾಹದಿಂದ ಒಡಂಬಡ ಬೇಕೆಂದೂ, ಈ ಪ್ರಕಾರ ತನ್ನ ದಿವ್ಯ ಸೇವೆಯನ್ನು ಎಲ್ಲಾ ಜಾಗ್ರತೆಯಿಂದ ಈಡೇರಿಸಿ ಸುವರ್ಣಲೋಕವನ್ನು ಶೇರ ಬೇಕೆಂದೂ, ಮಹಾ ಪ್ರೀತಿಯಿಂದಲೂ ಭಕ್ತಿವೈರಾಗ್ಯದಿಂದಲೂ ಬುದ್ಧಿ ಹೇಳುತ್ತಾನೆ. ಈ ಪತ್ರಿಕೆಯಲ್ಲಿ ಪೌಲನ ಭಕ್ತಿಯೂ, ವಿಶ್ವಾಸದ ಧೀರತ್ವವೂ, ಮರಣವನ್ನು ಕುರಿತು ಅವನಲ್ಲಿದ್ದ ಆಲೋಚನೆಯೂ, ಪರಮ ಪದವಿಯಲ್ಲಿ ಶೇರುವದನ್ನು ಕುರಿತು ಅವನಲ್ಲಿದ್ದ ನಂಬಿಕೆಯೂ ಸ್ಪಷ್ಟವಾಗಿ ತೋರುತ್ತವೆ.